In the application cited above, R.R. Oomberbhoy Pvt Ltd., Bangalore, has sought clarification regarding the rate of tax applicable on `pasta', a wheat based product.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No.CLR.CR.22/10-11, Dated:09.12.2010

It is clarified that 'pasta' is liable to tax at 13.5% under Section 4(1)(b) of the Karnataka Value Added Tax Act, 2003.

PRADEEP SINGH KHAROLA

PR-1762

Commissioner of Commercial Taxes, (Karnataka), Bangalore.

ಕಂದಾಯ ಇಲಾಖೆ

ಅಧಿಸೂಚನೆ

ಸಂಖ್ಯೆ: ಕಂಇ 48 ಭೂದಾಸೇ(1) 2009, ಬೆಂಗಳೂರು, ದಿನಾಂಕ:16.12.2010

ವಿಷಯ: ಭೂದಾಖಲೆಗಳ ಜಂಟಿ ನಿರ್ದೇಶಕರು ವೃಂದದ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2009ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸಮಸಂಖ್ಯೆ ಪತ್ರ ದಿನಾಂಕ:15.12.2009.

2) ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ (ಜಿ) 37/2009–10, ದಿನಾಂಕ:02.08.2010 ಮತ್ತು ದಿನಾಂಕ:28.10.2009.

ಉಲ್ಲೇಖ (1)ರ ಅಧಿಸೂಚನೆಯಲ್ಲಿ ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾಪಟ್ಟಿಯನ್ನು ದಿನಾಂಕ:01.01.2009ರಲ್ಲಿದ್ದಂತೆ ಪ್ರಕಟಿಸಿರುವುದನ್ನು ರದ್ದುಪಡಿಸಿದೆ. ಮುಂದುವರೆದು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2009 ರಲ್ಲಿದ್ದಂತೆ ಇದರೊಂದಿಗೆ ಲಗತ್ತಿಸಿದಂತೆ ಪ್ರಕಟಿಸಲಾಗಿದೆ.

ಈ ಕುರಿತು ಆಕ್ಷೇಪಣೆಗಳು ಇದ್ದಲ್ಲಿ ಬಾಧಿತರು ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಇವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಮಾಪನ)

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಜಂಟಿ ನಿರ್ದೇಶಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ

ದಿನಾಂಕ:01.01.2009 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯ ಹೆಸರು ಶ್ರೀಯುತರಾದ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಭೂ.ಜಂ.ನಿ. (ಕಾನಿ) ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
1	2	3	4	5	6
1.	ಮುದ್ದುರಂಗಪ್ಪ	04.03.1952	21.01.1980	17.06.1992	
2.	ಎಂ. ಶಿವಮಾದಯ್ಯ	05.08.1954	21.01.1980	18.06.1992	
3.	ಸ್ಯೆಯದ್ ಸಜ್ಜದ್ ಅಹ್ಮದ್	17.12.1950	21.01.1980	14.06.1993	
4.	ಕೃಷ್ಣಮೂರ್ತಿ ಗೋಪಾಲ್	09.03.1956	14.09.1984	06.09.2006	ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 39 ಭೂದಾಸೇ(1) 2005, ದಿ:26.05.2010 ರಲ್ಲಿ ದಿನಾಂಕ:06.09.2006 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸ್ಥಾನಪನ್ನಾಧಾರದ ಮೇಲೆ ಬಡ್ತಿ ಪಡೆದಿರುತ್ತಾರೆ.
5.	ಸಯ್ಯದ್ ಇಲಿಯಾಸ್ ಅಹ್ಮದ್	26.11.1955	28.09.1984	06.09.2006	

ಬಿ.ವಿ. ಚೌಕಿಮಠ

ಪಿ.ಆರ್.1787

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಮಾಪನ)

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರ ನಡವಳಿ

ಸಂಖ್ಯೆ: ಸಿಬ್ಬಂದಿ.ಶಿಸ್ತು. ಟ್ರ್ಯಾಪ್.21/2007–08, ದಿನಾಂಕ:20.09.2010

ವಿಷಯ: ಶ್ರೀ ಬಿ.ಎಲ್. ಯಡಹಳ್ಳಿ, ಭೂಮಾಪಕರು ಇವರ ವಿರುದ್ಧದ ಟ್ರ್ಯಾಪ್ ಪ್ರಕರಣದಲ್ಲಿನ ಅಂತಿಮ ಆದೇಶದ ಬಗ್ಗೆ.

ಉಲ್ಲೇಖ: 1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಲೋಕ್.ಐಎನ್‌ವಿ(ಜಿ)/ಎಲ್–6/ಸಿಆರ್–1/2008/ಬಿಜಿಕೆಟಿ ದಿನಾಂಕ:24/28.01.2008, 21.04.2008 & 28.08.2008.

2) ಈ ಕಛೇರಿ ನಡವಳಿ ಸಮಸಂಖ್ಯೆ ದಿನಾಂಕ:01.04.2008, 28.06.2008 ಮತ್ತು 20.02.2009.

3) ಈ ಕಛೇರಿ ನಡವಳಿ ದಿನಾಂಕ:05.03.2009 (ಅಭಿಯೋಜನಾ ಮಂಜೂರಾತಿ ಕುರಿತು)

4) ಮಾನ್ಯ ಜಿಲ್ಲಾ ಸೆಷನ್ ಕೋರ್ಟ್, ಬಾಗಲಕೋಟೆ ರವರ ತೀರ್ಪಿನ ಸಂಖ್ಯೆ:47/2009 ದಿನಾಂಕ:02.07.2010.

5) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ನಡವಳಿ ಸಂಖ್ಯೆ: ಲೋಕ್.ಐಎನ್‌ವಿ(ಜಿ)/ಎಲ್–6/ಸಿಆರ್–1/2008 ಬಿಜಿಕೆಟಿ ದಿನಾಂಕ:18/27.08.2010.

6) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ.9.ಸೇಇವಿ 95 ದಿನಾಂಕ:26.06.1996.

ಪ್ರಸ್ತಾವನೆ:

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿ ದಿನಾಂಕ:24/28.01.2008ರ ಪ್ರಕಾರ ಶ್ರೀ ದುಂಡಪ್ಪ ಬಿನ್ ಗುಡದಪ್ಪ ಹಡಪದ, ತೊಲಮಟ್ಟಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಬಾಗಲಕೋಟೆ ಜಿಲ್ಲೆ ಲೋಕಾಯುಕ್ತ ಕಛೇರಿಗೆ ದಿನಾಂಕ:22.01.2008ರಂದು ಫಿರ್ಯಾದಿ ನೀಡಿ, ಫಿರ್ಯಾದುದಾರರ ಸ.ನಂ.153 ರ 12 ಎಕರೆ ಜಮೀನನ್ನು ಸರ್ವೆ ಮಾಡಲು ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು ಮತ್ತು ಶ್ರೀ ಮುತ್ತಪ್ಪ ಹನಮಪ್ಪ ತುರನೂರ, ದ್ವಿತೀಯ ದರ್ಜೆ ಭೂಮಾಪಕರು ಇವರುಗಳು ರೂ.1,500–00ಗಳ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆಂದು ದೂರು ನೀಡಿದ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಿರೋಧಕ ಕಾಯಿದೆ 1988ರ ಕಲಂ 7, 13(1) (ಡಿ) ಕಲಂ 13(2)ರ ಅಡಿಯಲ್ಲಿ ಮೊಕದ್ದಮೆ ಸಂಖ್ಯೆ: 1/2008ರ ಪ್ರಕಾರ ದಿನಾಂಕ:22.01.2008ರಂದು ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೆತ್ತಿಕೊಂಡಿದ್ದು ದಿನಾಂಕ:22.01.2008ರಂದು ಲೋಕಾಯುಕ್ತರವರು ತಹಶೀಲ್ದಾರ್ ಕಛೇರಿ, ಬೀಳಗಿ ತಾಲ್ಲೂಕಿನಲ್ಲಿ ಬೀಸಿದ (ಟ್ರ್ಯಾಪ್) ಬಲೆಯಲ್ಲಿ ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು ಇವರು ಫಿರ್ಯಾದುದಾರರಿಂದ ತಹಶೀಲ್ದಾರ್ ಕಛೇರಿ, ಬೀಳಗಿ ಕಛೇರಿಯಲ್ಲಿ ಲಂಚದ ಹಣವನ್ನು ಪಡೆಯುತ್ತಿರುವಾಗ ಸಿಕ್ಕಿಬಿದ್ದ ಹಿನ್ನೆಲೆಯಲ್ಲಿ ಈ ಕಛೇರಿ ನಡವಳಿ ದಿನಾಂಕ:24/28.01.2008ರಲ್ಲಿ ಶ್ರೀ ಬಿ.ಎಲ್. ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು ಇವರನ್ನು ಅಮಾನತ್ತುಗೊಳಿಸಿದೆ. ನಂತರ ಶ್ರೀ ಎಂ.ಹೆಚ್. ತುರನೂರ, ದ್ವಿತೀಯ ದರ್ಜೆ ಭೂಮಾಪಕರು ಇವರು ಲಂಚವನ್ನು ತೆಗೆದುಕೊಳ್ಳಲು ಪ್ರೇರೇಪಿಸಿದ ಮೇರೆಗೆ ಉಲ್ಲೇಖ (1)ರ ದಿನಾಂಕ:28.06.2008ರಂದು ಸದರಿ ನೌಕರರನ್ನು ಅಮಾನತ್ತುಗೊಳಿಸಲಾಗಿದೆ.

ನಂತರ ನೌಕರರುಗಳನ್ನು ದಿನಾಂಕ:28.08.2008ರ ಈ ಕಛೇರಿ ನಡವಳಿಯಲ್ಲಿ ಅಮಾನತ್ತಿನಿಂದ ತೆರವುಗೊಳಿಸಿ, ಕ್ರಮವಾಗಿ ತಹಶೀಲ್ದಾರ್, ಇಂಡಿ ಮತ್ತು ತಹಶೀಲ್ದಾರ್, ರಾಮದುರ್ಗ ಕಛೇರಿಗೆ ಪುನರ್ ನೇಮಕಗೊಳಿಸಿ ಆದೇಶಿಸಲಾಗಿದೆ. ನಂತರ ನೌಕರರುಗಳನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ದಿನಾಂಕ:05.03.2009ರಂದು ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಸದರಿ ನೌಕರರುಗಳ ಕ್ರಿಮಿನಲ್ ಪ್ರಕರಣವು ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದ ಸಮಯದಲ್ಲಿ ಶ್ರೀ ಮುತ್ತಪ್ಪ ಹನುಮಪ್ಪ ತುರನೂರ ಇವರು ದಿನಾಂಕ:09.12.2009ರಂದು ಮರಣ ಹೊಂದಿರುತ್ತಾರೆಂದು, ಸದರಿಯವರ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಿ (abated)ರುತ್ತಾರೆ. ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ಭೂಮಾಪಕರು ಇವರ ವಿರುದ್ಧ ಆರೋಪ ಸಾಬೀತಾಗಿದ್ದು, ಆರೋಪಿಗೆ 1988ರ ಲಂಚ ವಿರೋಧ ಕಾಯ್ದೆ ಕಲಂ 7ರಲ್ಲಿ ಮಾಡಿದ ಅಪರಾಧಕ್ಕಾಗಿ 4 ವರ್ಷಗಳ ಶಿಕ್ಷೆ ಮತ್ತು ರೂ.5000–00 ಗಳ ದಂಡ ವಿಧಿಸಿದ್ದು, ಪಾವತಿಸಲು ತಪ್ಪಿದಲ್ಲಿ ಹೆಚ್ಚಿನ 9 ತಿಂಗಳು ಸಾದಾ ಶಿಕ್ಷೆ ಮತ್ತು ಸದರಿ ಕಾಯ್ದೆ ಕಲಂ 13(1) (ಡಿ) ಸಹವಾಚ 13(2)ರ ಪ್ರಕಾರ ಮಾಡಿದ ಅಪರಾಧಕ್ಕಾಗಿ 5 ವರ್ಷ ಸಾದಾ ಶಿಕ್ಷೆ ಮತ್ತು ರೂ.6,000–00 ಗಳ ದಂಡ ವಿಧಿಸಿದ್ದು, ಪಾವತಿಸಲು ತಪ್ಪಿದಲ್ಲಿ 12 ತಿಂಗಳ ಹೆಚ್ಚಿನ ಸಾದಾಶಿಕ್ಷೆ ವಿಧಿಸಿ, ಈ ಎಲ್ಲಾ ಶಿಕ್ಷೆಗಳು ಒಟ್ಟಿಗೆ ಜಾರಿಗೆ ಬರುವಂತೆ ತೀರ್ಪು ನೀಡಿರುತ್ತಾರೆ.

ಉಲ್ಲೇಖ (5)ರ ಲೋಕಾಯುಕ್ತರವರ ಪತ್ರದಲ್ಲಿ ತಿಳಿಸಿರುವಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ.ನಿ. 95 ದಿನಾಂಕ:26.06.1996 ರಂತೆ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ. ಸರ್ಕಾರದ ಸುತ್ತೋಲೆ ದಿನಾಂಕ:26.06.1996ರಲ್ಲಿ ತಿಳಿಸಿರುವಂತೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(1) ರನುಸಾರ ಸದರಿ ನಿಯಮಗಳು, 11, 12 ಮತ್ತು 13ರಲ್ಲಿ ಏನೇ ಹೇಳಲಾಗಿದ್ದರೂ ಕ್ರಿಮಿನಲ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಆರೋಪಕ್ಕಾಗಿ ದೋಷಸಿದ್ದಿಯಾದ ಸರ್ಕಾರಿ ನೌಕರರನ್ನು ಪುನಃ ಇಲಾಖಾ ವಿಚಾರಣೆಗೆ ಒಳಪಡಿಸದೆಯೇ ಸೇವೆಯಿಂದ ವಜಾ ಮಾಡುವ ಅಥವಾ ತೆಗೆದುಹಾಕುವ ದಂಡನೆಯನ್ನು ವಿಧಿಸಬಹುದಾಗಿದೆ ಎಂದು ಅಕಸ್ಮಾತ್ ಅಪೀಲಿನಲ್ಲಿ ಆಪಾದಿತ ನೌಕರರು ಖುಲಾಸೆಯಾದಲ್ಲಿ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡು ವಜಾಗೊಳಿಸಿದ ಆದೇಶ ಆಗದೇ ಇದ್ದಲ್ಲಿ ಲಭ್ಯವಾಗಬಹುದಾದ ಎಲ್ಲಾ ಸೇವಾ ಭತ್ಯೆಗಳಿಗೆ ಅರ್ಹರಾಗಿರುತ್ತಾರೆಂದು ಸರ್ಕಾರದ ಸುತ್ತೋಲೆಯ ಅಂಶವನ್ನು ಪರಿಗಣಿಸಿ, ಕ್ರಿಮಿನಲ್ ಆರೋಪಕ್ಕಾಗಿ ದೋಷಸಿದ್ದಿಯಾದ ಸರ್ಕಾರಿ ನೌಕರರನ್ನು ಪುನಃ ಇಲಾಖಾ ವಿಚಾರಣೆಗೆ ಒಳಪಡಿಸದೆಯೇ ಸೇವೆಯಿಂದ ವಜಾ ಮಾಡುವ ಬಗ್ಗೆ ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀಮತಿ ಜಿ. ಕಲ್ಪನಾ, ಭಾ.ಆ.ಸೇ. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 9(3)ರ ಓದಿಕೊಂಡ ನಿಯಮ 8(viii)ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್ ಕಛೇರಿ, ಇಂಡಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪಿ.ಆರ್.1532

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿ, ರಾಮನಗರಜಿಲ್ಲೆ, ರಾಮನಗರ

ವಿಷಯ: ಸಮಾಪನೆಗೊಂಡಿರುವ ಗುಡ್ಡೇತಿಮ್ಮಸಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)., ಚನ್ನಪಟ್ಟಣ ತಾಲ್ಲೂಕು ಇದರ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು (ಗ್ರಾ) ಜಿಲ್ಲೆ ರವರು ಆದೇಶ ಸಂಖ್ಯೆ: ಡಿ.ಆರ್.ಬಿ./ಆರ್/ಸಮಾಪನೆ/68/2004–05 ದಿನಾಂಕ:21.06.2004.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ರವರ ಪತ್ರ ಸಸನಿರಾ46:ಸಮಾಪನೆ:15: 2010–11, ದಿನಾಂಕ:22.04.2010.

3) ಸಹಕಾರ ಅಭಿವೃದ್ಧಿ ಅಧಿಕಾರಿ, ಚನ್ನಪಟ್ಟಣರವರ ಪತ್ರ ಸಂಖ್ಯೆ: ಸಅಚ:ಗುಡೇ:146:2010–11.

ಪ್ರಸ್ತಾವನೆ:

ಗುಡ್ಡೇ ತಿಮ್ಮಸಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)., ಚನ್ನಪಟ್ಟಣ ತಾಲ್ಲೂಕು ಈ ಸಂಘವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಇವರು ನೊಂದಣಿ ಸಂಖ್ಯೆ: ಸನಿರಾ 46/ಸಾಮಾನ್ಯ/ ನೋಂದಣಿ/25699/98–99 ದಿನಾಂಕ:25.06.1998ರ ರೀತ್ಯಾ ನೊಂದಾಯಿಸಲಾಗಿರುತ್ತದೆ. ಈ ಸಂಘವು ನೊಂದಣಿ ನಂತರ ಕೆಲವು ವರ್ಷಗಳು ಮಾತ್ರ ಕಾರ್ಯನಿರ್ವಹಿಸಿ, ಆನಂತರ ಕೆಲಸ ಕಾರ್ಯಗಳನ್ನು ನಿರ್ವಹಿಸದೇ ಸ್ಥಗಿತಗೊಂಡ ಹಿನ್ನಲೆಯಲ್ಲಿ ಈ ಸಂಘವನ್ನು ಉಲ್ಲೇಖ–1ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ ಚನ್ನಪಟ್ಟಣ ಇವರನ್ನು ಈ ಸಂಘದ ಸಮಾಪನಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ಸದರಿ ಸಮಾಪನಾಧಿಕಾರಿಯವರು ಸಂಘದ ಪ್ರಭಾರವನ್ನು ವಹಿಸಿಕೊಂಡು ಸಂಘದ ಸಮಾಪನಾ ನಡವಳಿಯನ್ನು ನಡೆಸಿರುತ್ತಾರೆ.

ಸದರಿ ಸಮಾಪನಾಧಿಕಾರಿಗಳು ದಿನಾಂಕ:15.03.2010ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿ ಸಂಘದ ಪುನಃಶ್ಚೇತನಗೊಳಿಸುವ ಬಗ್ಗೆ ಆಸಕ್ತಿ ಇದ್ದಲ್ಲಿ ಅಥವಾ ಸಂಘದ ನೋಂದಣಿ ರದ್ಧತಿಯ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಖುದ್ದು ಲಿಖಿತ ಮನವಿ ಸಲ್ಲಿಸುವಂತೆಯೂ ತಪ್ಪಿದಲ್ಲಿ ಯಾರಿಗೂ ಸಂಘದ ಪುನಃಶ್ಚೇತನದ ಬಗ್ಗೆ ಆಸಕ್ತಿ ಇರುವುದಿಲ್ಲವೆಂತಲೂ ನೊಂದಣಿ ರದ್ಧತಿ ಬಗ್ಗೆ ಯಾರಿಂದಲೂ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ, ನೊಂದಣಿ ರದ್ಧತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದು ತಂಟೆ ತಕರಾರು ಸ್ವೀಕೃತಿಯಾಗದ ಕಾರಣ ದಿನಾಂಕ:29.03.2010 ರಂದು ಸಂಘದ ಆಸ್ತಿ–ಜವಾಬ್ದಾರಿಯನ್ನು ಶೂನ್ಯಗೊಳಿಸಿ ಸಂಘದ ನೊಂದಣಿ ರದ್ಧತಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಸಂಘದ ಉಳಿತಾಯ ಖಾತೆಯಲ್ಲಿ ರೂ.3085=44ಗಳನ್ನು ಸಹಕಾರ ಸಂಘಗಳ ಉಪ–ನಿಬಂಧಕರ ಪಿ.ಡಿ. ಖಾತೆಗೆ ಜಮಾಗೊಳಿಸಿರುತ್ತಾರೆ. ಉಳಿದಂತೆ ಸಂಘದ ಆಸ್ತಿ ಜವಾಬ್ದಾರಿಯನ್ನು ಶೂನ್ಯಗೊಳಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ರವರು ಸದರಿ ಸಮಾಪನಾಧಿಕಾರಿಗಳ ತೀರ್ಮಾನದಂತೆ, ಸದರಿ ಸಂಘವನ್ನು ಸಮಾಪನಾ ಸ್ಥಿತಿಯಲ್ಲಿ ಮುಂದುವರೆಸಿರುವುದು ಸಂಘದ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿಲ್ಲದಿರುವುದರಿಂದ, ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಗೊಳಿಸುವಂತೆ ಕೋರಿ ಉಲ್ಲೇಖ–2ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಯಾರಿಗೂ ಆಸಕ್ತಿ ಇಲ್ಲದಿರುವುದನ್ನು ಮನಗಂಡು, ಈ ಸಂಘದ ನೊಂದಣಿಯನ್ನು ರದ್ದುಗೊಳಿಸುವುದು ಸೂಕ್ತ ಎಂದು ತೀರ್ಮಾನಿಸಿ, ಈ ಕೆಳಗಿನ ಆದೇಶವನ್ನು ನೀಡಲಾಗಿದೆ.

ಆದೇಶ

ಸಂಖ್ಯೆ: ಉನಿರಾ/ಸಮಾಪನೆ/8/2010–11, ದಿನಾಂಕ:21.07.2010

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರಲ್ಲಿ ದತ್ತವಾಗಿರುವ ಅಧಿಕಾರದ ಮೇರೆಗೆ ಡಿ.ಬಿ. ಲಿಂಗಣ್ಣಯ್ಯ ಸಹಕಾರ ಸಂಘಗಳ ಉಪನಿಬಂಧಕರು, ರಾಮನಗರ ಜಿಲ್ಲೆ, ರಾಮನಗರ ಆದ ನಾನು ಸಮಾಪನೆಯಲ್ಲಿರುವ ಗುಡ್ಡೇತಿಮ್ಮಸಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)., ಚನ್ನಪಟ್ಟಣ ಈ ಸಂಘದ ನೊಂದಣಿ ಸಂಖ್ಯೆ: ಸನಿರಾ 46/ಸಾಮಾನ್ಯ/ ನೋಂದಣಿ/25699/98–99, ದಿನಾಂಕ:25.06.1998 ಅನ್ನು ರದ್ದುಪಡಿಸಿರುತ್ತೇನೆ. ಈ ಆದೇಶದ ದಿನಾಂಕದಿಂದ ಈ ಸಂಘವು ಸಹಕಾರ ಸಂಸ್ಥೆಯಾಗಿ ಅಸ್ತಿತ್ವದಲ್ಲಿರುವುದಿಲ್ಲ.

ಸದರಿ ಸಂಘದ ಮೂಲ ನೊಂದಣಿ ಪತ್ರ ಹಾಗೂ ಲೆಕ್ಕ ಪುಸ್ತಕಗಳು ಇದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ಇವರ ಕಛೇರಿಯಲ್ಲಿ ದಾಖಲಿಸಿ ಸ್ವೀಕೃತಿಯನ್ನು ಪಡೆಯುವುದು.

ಈ ಆದೇಶವನ್ನು ನನ್ನ ಸಹಿ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ದಿನಾಂಕ:21.07.2010 ರಂದು ನೀಡಲಾಗಿದೆ.

ಸಹಕಾರ ಸಂಘಗಳ ಉಪನಿಬಂಧಕರು,
ರಾಮನಗರ ಜಿಲ್ಲೆ, ರಾಮನಗರ.

ಪಿ.ಆರ್.1351

ಕರ್ನಾಟಕ ಸಹಕಾರಿಗಳ ನಿಬಂಧಕರು, ಇವರ ನ್ಯಾಯಾಲಯ,

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52

ದಾವಾ ಸಂಖ್ಯೆ: RCS/ DIS/ D4/ SOU/ 2/ 2010-11

ಅರ್ಜಿದಾರರು:	ಪ್ರತಿವಾದಿ
ಪ್ರಧಾನ ವ್ಯವಸ್ಥಾಪಕರು, ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಅಪರೇಟಿವ್ ಲಿ., ಹೊಸಪೇಟೆ, ಹಾವೇರಿ ಶಾಖೆ.	1) ಅರವಿಂದ ಫಕ್ಕೀರಪ್ಪ ದೊಡ್ಡಮನಿ, ವಯಸ್ಸು:43 ವರ್ಷ, ಉದ್ಯೋಗ:ವ್ಯಾಪಾರ ಸಾ: ಶಿದ್ದದೇವಪುರ, ಹಾವೇರಿ, ತಾ:ವ ಜಿ: ಹಾವೇರಿ.
	2) ಶ್ರೀ ಗಂಗಾಧರ ರೇವಣಸಿದ್ದಪ್ಪ ಸಾತೇನಹಳ್ಳಿ, ವಯಸ್ಸು:38 ವರ್ಷ, ಉದ್ಯೋಗ: ಪಿಗ್ಮಿ ಕಲೆಕ್ಟರ್, ಸಾ: ಯಾಲಕ್ಕಿ ಓಣಿ, ಹಾವೇರಿ. ತಾ:ವ ಜಿ: ಹಾವೇರಿ.
	3) ಶ್ರೀ ಶಂಭುಲಿಂಗ ಚನ್ನಬಸಪ್ಪ ಸಾತೇನಹಳ್ಳಿ ವಯಸ್ಸು: 40 ವರ್ಷ, ಉದ್ಯೋಗ: ಅಕ್ಕಿ ವ್ಯಾಪಾರ, ಸಾ: ಯಾಲಕ್ಕಿ ಓಣಿ, ಹಾವೇರಿ. ತಾ:ವ ಜಿ: ಹಾವೇರಿ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಕಲಂ 44(1) ರಡಿ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಆದೇಶದ ನೋಟೀಸ್

ಮೇಲ್ಕಂಡ ಅರ್ಜಿದಾರರು ಈ ದಾವೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 39ರಡಿ ದಾಖಲಿಸಿ, ಪ್ರತಿವಾದಿಗಳಿಂದ ವಸೂಲಾಗಬೇಕಾದ ಸಾಲದ ಬಾಕಿ ಮೊತ್ತ ರೂ.33470–00 ವಸೂಲು ಮಾಡಲು ಡಿಕ್ರಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಅರ್ಜಿಯೊಂದಿಗೆ ಅರ್ಜಿದಾರರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, 1ನೇ ಪ್ರತಿವಾದಿಗೆ ಸೇರಿದ ಸ್ಥಿರಾಸ್ತಿಗಳನ್ನು ಷರತ್ತುಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಆದೇಶ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ದಾವೆ ಅರ್ಜಿಯನ್ನು ಕಡತಕ್ಕೆ ತೆಗೆದುಕೊಂಡು ದಿನಾಂಕ:26.06.2010 ರಂದು ಪ್ರಕರಣದ ವಿಚಾರಣೆ ನಡೆಸಲಾಯಿತು. ಮಧ್ಯಂತರ ಅರ್ಜಿಯ ಬಗ್ಗೆ ಅರ್ಜಿದಾರರು ತಮ್ಮ ಕೋರಿಕೆ ಮಂಡಿಸಿರುತ್ತಾರೆ. ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಕೋರಿಕೆಯಲ್ಲಿ 1ನೇ ಪ್ರತಿವಾದಿಯು ತಮ್ಮ ಸಂಸ್ಥೆಯಲ್ಲಿ ದಿನಾಂಕ:08.07.2008 ರಂದು ರೂ.22500/–ಗಳ ಸಾಲ ಪಡೆದಿದ್ದು ಈ ಸಾಲ ತೀರುವಳಿಯಾಗದೆ ಸುಸ್ತಿದಾರರಾಗಿರುತ್ತಾರೆಂದು ಈ ಸಾಲಕ್ಕೆ 2ನೇ ಹಾಗೂ 3ನೇ ಪ್ರತಿವಾದಿಗಳು ಜಾಮೀನುದಾರರೆಂದು, 1ನೇ ಪ್ರತಿವಾದಿಯು ತಮ್ಮ ಸ್ಥಿರಾಸ್ಥಿಯಾದ ಷೆಡ್ಯೂಲ್ ಸ್ವತ್ತನ್ನು ಈಗ ಪರಭಾರೆ ಮಾಡಲು ಉದ್ದೇಶಿಸಿದ್ದಾರೆಂದು ಇದನ್ನು ಅವರು ಪರಭಾರೆ ಮಾಡಿದಲ್ಲಿ ಈ ದಾವೆಯಲ್ಲಿ ಡಿಕ್ರಿ ನೀಡಿದರೂ ಸಾಲ ವಸೂಲಾಗದೆ ಹೋಗುವ ಸಂಭವವಿರುವುದರಿಂದ ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಅರ್ಜಿದಾರರ ಅರ್ಜಿ ಮತ್ತು ಕೋರಿಕೆಯನ್ನು ಹಾಗೂ ಅರ್ಜಿದಾರರ ಸಹಕಾರಿ ಪರ ಸಲ್ಲಿಸಿರುವ ದಾಖಲೆಗಳು, ಪ್ರಮಾಣ ಪತ್ರದ ಅಂಶಗಳನ್ನು ಪರಿಶೀಲಿಸಿದೆ. ಅರ್ಜಿದಾರರ ಸಂಸ್ಥೆಯಲ್ಲಿ ಸಾಲ ಪಡೆದಿದ್ದು ಸಾಲಗಾರರ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುವುದನ್ನು ಪರಿಶೀಲಿಸಲಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44ರ ರೀತ್ಯಾ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಮಾಡಲು ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸುವುದು ಈ ಹಂತದಲ್ಲಿ ಅಗತ್ಯವೆಂದು ಮನಗಂಡು, ಕೆಳಕಂಡ ಮಧ್ಯಂತರ ಆದೇಶವನ್ನು ಹೊರಡಿಸಿದೆ.

ಮಧ್ಯಂತರ ಆದೇಶ

ಈ ಆದೇಶದ ಅನುಬಂಧದಲ್ಲಿ ವಿವರಿಸಿರುವ 1ನೇ ಪ್ರತಿವಾದಿಯ ಹೆಸರಿನಲ್ಲಿನ ಸ್ಥಿರಾಸ್ತಿಗಳನ್ನು ಈ ನ್ಯಾಯಾಲಯದಲ್ಲಿ ಅರ್ಜಿದಾರರು ದಾಖಲು ಮಾಡಿರುವ ದಾವೆ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟು, ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿ, ಆದೇಶ ಹೊರಡಿಸಿದೆ. 1ನೇ ಪ್ರತಿವಾದಿಯು ಈ ಆದೇಶವನ್ನು ತೆರವುಗೊಳಿಸಲು ಇಚ್ಛಿಸಿದಲ್ಲಿ, ಅರ್ಜಿದಾರರ ಸಹಕಾರಿಯಲ್ಲಾಗಲೀ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಾಗಲೀ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಾಗಲೀ ಅಥವಾ ಇನ್ನಾವುದೇ ಸಹಕಾರ ಬ್ಯಾಂಕಿನಲ್ಲಿ ರೂ.34.000 (ರೂಪಾಯಿ ಮೂವತ್ತ ನಾಲ್ಕು ಸಾವಿರಗಳು ಮಾತ್ರ) ಗಳನ್ನು ಠೇವಣಿ ಮಾಡಿ, ಸಂಬಂಧಿಸಿದ ರಶೀದಿಯನ್ನು ಈ ಆದೇಶ ಪಡೆದ ದಿನದಿಂದ 15 ದಿವಸಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ವಿಫಲರಾದಲ್ಲಿ ಪ್ರತಿವಾದಿಯ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಿ, ಲಭ್ಯವಿರುವ ದಾಖಲೆಗಳು ಮತ್ತು ಅರ್ಹತೆಯ ಅನುಸಾರ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿಕೊಂಡಿರುವುದನ್ನು ಸ್ಥಿರೀಕರಣಗೊಳಿಸಿ, ಆದೇಶಿಸಲಾಗುವುದೆಂದು ಈ ಮೂಲಕ ಪ್ರತಿವಾದಿಗಳಿಗೆ ಆದೇಶಿಸಿದೆ. ಈ ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ:18.09.2010 ರಂದು ಬೆಳಿಗ್ಗೆ 11–00 ಗಂಟೆಗೆ ನಿಗದಿಪಡಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಸೂಕ್ತ ತಿದ್ದುಪಡಿ ಆದ ನಂತರ, ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:26.06.2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಸಹಕಾರಿಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

ಸಹಕಾರ ಸಂಘಗಳ ನಿಬಂಧಕರು (ಕರ್ನಾಟಕ ರಾಜ್ಯ, ಬೆಂಗಳೂರು) ಇವರ ನ್ಯಾಯಾಲಯ, ಸಹಕಾರ ಸಂಘಗಳ ನಿಬಂಧಕರ ಕಛೇರಿ,
ನಂ.1, ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52
ದಾವೆ ಸಂಖ್ಯೆ: ಆರ್‌ಸಿಎಸ್/ ಡಿಐಎಸ್/ ಡಿ4/ ಸೌ/ 2/2010–11
ಅನುಬಂಧ
ಶ್ರೀ ಅರವಿಂದ ಫಕ್ಕೀರಪ್ಪ ದೊಡ್ಡಮನಿ, ಇವರಿಗೆ ಸೇರಿದ, ಪರತ್ತಿಗೊಳಪಟ್ಟು, ತೀರ್ಪು ಪೂರ್ವ ಜಪ್ತಿ ನೋಟೀಸ್ ಆದೇಶಕ್ಕೆ ಒಳಪಡಿಸಿದ ಸ್ಥಿರಾಸ್ತಿಗಳ ವಿವರಗಳು

ಹಾವೇರಿ ಜಿಲ್ಲೆ, ಹಾವೇರಿ ತಾಲ್ಲೂಕು, ಹಾವೇರಿ ಗ್ರಾಮದ ಸಿಟಿ ಸರ್ವೆ ನಂ.2814–ಎ ನಲ್ಲಿ 3–54–5–ಚೌ–ಮೀ. ಟೆನ್ನೂರು ಬಿ 683 ಚೌ–ಪೂ ಇದು ಪೂರಾ

ಚೆಕ್ಕುಬಂದಿ:

ಪೂರ್ವಕ್ಕೆ: ಸರಕಾರಿ ರಸ್ತೆ
ಪಶ್ಚಿಮಕ್ಕೆ: ರಾಜಶೇಖರ ಮುರಿಗೆಪ್ಪ ಕವಲುಗುಡ್ಡ ಇವರ ಆಸ್ತಿ
ಉತ್ತರಕ್ಕೆ: ಅಮೀಜಾನ ಮುಲ್ಲಾ ಇವರ ಆಸ್ತಿ
ದಕ್ಷಿಣಕ್ಕೆ: ಗಣೇಶಪ್ಪ ಅಂಗಡಿ ಇವರ ಆಸ್ತಿ

ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪಿ.ಆರ್.1397

ಸಹಕಾರ ಇಲಾಖೆ
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರೋಡ್, ಬೆಂಗಳೂರು–560052
ನಂ.ಯುಬಿಸಿ–3/82/ಸಮಾಪನೆ/2010–11, ದಿನಾಂಕ:25.08.2010

ವಿಷಯ: ಬೆಳಗಾಂ ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾಂ ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಜನರಲ್ ಮ್ಯಾನೇಜರ್, ಆರ್.ಬಿ.ಐ. ಮುಂಬೈ ಇವರ ಪತ್ರ ಸಂಖ್ಯೆ: ಯುಬಿಡಿ:ಸಿಓ: ಬಿಎಸ್‌ಡಿ/ ಎನ್‌ಎಸ್‌ಬಿ/ 111/ 937/ 12.23.018/2010–11, ದಿನಾಂಕ:30.07.2010.

2) ಕಾರ್ಯನಿರ್ವಾಹಕ ನಿರ್ದೇಶಕರು, ಆರ್‌ಬಿಐ. ಮುಂಬೈ ಇವರ ಪತ್ರ ಸಂಖ್ಯೆ: ಯುಬಿಡಿ: ಸಿಓ: ಬಿಎಸ್‌ಡಿ/ 111/ ಎಲ್‌ಸಿಆರ್/62/12.23.018/ 2010–11 ದಿನಾಂಕ:27.07.2010.

ಪ್ರಸ್ತಾವನೆ:

ಬೆಳಗಾಂ ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾಂ ಇದು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಕಲಂ 11(1), 22(3)(ಎ), ಮತ್ತು 22(3)(ಬಿ) ಗಳನ್ನು ಪಾಲಿಸಲು ವಿಫಲವಾಗಿದ್ದು, ಠೇವಣಿದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ನಿರ್ವಹಿಸುತ್ತಿದ್ದುದರಿಂದ ಬ್ಯಾಂಕಿಂಗ್ ವ್ಯವಹಾರ ನಡೆಸಲು ನೀಡಿದ್ದ ಪರವಾನಗಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದುಗೊಳಿಸಿದೆ ಹಾಗೂ ಉಲ್ಲೇಖ (2)ರ ಪತ್ರದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರಡಿ ಬ್ಯಾಂಕಿನ ಸಮಾಪನೆಗೆ ಆದೇಶಿಸುವಂತೆ ತಿಳಿಸಿರುವುದರ ಮೇರೆಗೆ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರಡಿ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/201/ಸಿಎಲ್‌ಎಂ/2008 ದಿನಾಂಕ:27.05.2010ರಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರಿಗೆ ದತ್ತವಾದ ಅಧಿಕಾರದನ್ವಯ ಬೆಳಗಾಂ ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾಂ ಇದನ್ನು ಸಮಾಪನೆಗೊಳಿಸಿ ಕಲಂ 73(1)ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಳಗಾಂ ಉಪವಿಭಾಗ, ಇವರನ್ನು ಸಮಾಪಕರನ್ನಾಗಿ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಲಾಗಿದೆ.

ಸಮಾಪಕರು ಕೂಡಲೇ ಬ್ಯಾಂಕಿನ ಪ್ರಭಾರ ವಹಿಸಿಕೊಂಡು ಈ ಕಛೇರಿಗೆ ವರದಿ ಮಾಡುವುದು ಮತ್ತು ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಈ ಕಛೇರಿಯ ನಿರ್ದೇಶನ, ಸುತ್ತೋಲೆಗಳಿಗೆ ಅನುಸಾರವಾಗಿ ಬ್ಯಾಂಕಿನ ಆಸ್ತಿ–ಜವಾಬ್ದಾರಿಗಳ ವಿಲೇವಾರಿಗೆ ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:25.08.2010 ರಂದು ಹೊರಡಿಸಲಾಗಿದೆ.

ಎನ್. ರಾಜಣ್ಣ
ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)

ಪಿ.ಆರ್.1331

ಕರ್ನಾಟಕ ಸಹಕಾರಿಗಳ ನಿಬಂಧಕರು, ಇವರ ನ್ಯಾಯಾಲಯ,
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52
ದಾವಾ ಸಂಖ್ಯೆ: RCS/ DIS/ D4/ SOU/ 1/ 2010-11

ಅರ್ಜಿದಾರರು:	ಪ್ರತಿವಾದಿ
ಪ್ರಧಾನ ವ್ಯವಸ್ಥಾಪಕರು, ನವಕರ್ನಾಟಕ ಸೌಹಾರ್ಧ ಕ್ರೆಡಿಟ್ ಕೋ–ಅಪರೇಟಿವ್ ಲಿ., ಹೊಸಪೇಟೆ, ಹಾವೇರಿ ಶಾಖೆ.	1) ಆನಂದ ಉದ್ದಪ್ಪ ಕಡಕೋಳ ವಯಸ್ಸು: 26 ವರ್ಷ, ಉದ್ಯೋಗ: ವ್ಯಾಪಾರ ಸಾ: ಶಿವಾಜಿನಗರ, 2ನೇ ಕ್ರಾಸ್, ಹಾವೇರಿ ತಾ: ವ ಜಿ: ಹಾವೇರಿ.

	2) ಶ್ರೀ ಶಬ್ಬೀರ ಅಹ್ಮದ ಗೌಸುಸಾಬ ಅತ್ತಾರ, ವಯಸ್ಸು: 30 ವರ್ಷ, ಉದ್ಯೋಗ: ವ್ಯಾಪಾರ ಸಾ: ಶಿವಾಜಿನಗರ, 3ನೇ ಕ್ರಾಸ್, ಹಾವೇರಿ ತಾ: ವ ಜಿ: ಹಾವೇರಿ.
	3) ಶ್ರೀ ಉದ್ದಪ್ಪ ಭೀಮಪ್ಪ ಕಡಕೋಳ ವಯಸ್ಸು: 54 ವರ್ಷ, ಉದ್ಯೋಗ: ವ್ಯಾಪಾರ ಸಾ: ಶಿವಾಜಿನಗರ, 2ನೇ ಕ್ರಾಸ್, ಹಾವೇರಿ ತಾ: ವ ಜಿ: ಹಾವೇರಿ.

ಕರ್ನಾಟಕ ಸೌಹಾರ್ಧ ಸಹಕಾರಿ ಕಾಯ್ದೆ 1997 ಕಲಂ 44(1) ರಡಿ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಆದೇಶದ ನೋಟೀಸ್

ಮೇಲ್ಕಂಡ ಅರ್ಜಿದಾರರು ಈ ದಾವೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 39ರಡಿ ದಾಖಲಿಸಿ, ಪ್ರತಿವಾದಿಗಳಿಂದ ವಸೂಲಾಗಬೇಕಾದ ಸಾಲದ ಬಾಕಿ ಮೊತ್ತ ರೂ.26470–00 ವಸೂಲು ಮಾಡಲು ಡಿಕ್ರಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಅರ್ಜಿಯೊಂದಿಗೆ ಅರ್ಜಿದಾರರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, 1ನೇ ಪ್ರತಿವಾದಿಗೆ ಸೇರಿದ ಸ್ಥಿರಾಸ್ತಿಗಳನ್ನು ಷರತ್ತುಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಆದೇಶ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ದಾವೆ ಅರ್ಜಿಯನ್ನು ಕಡತಕ್ಕೆ ತೆಗೆದುಕೊಂಡು ದಿನಾಂಕ:26.06.2010 ರಂದು ಪ್ರಕರಣದ ವಿಚಾರಣೆ ನಡೆಸಲಾಯಿತು. ಮಧ್ಯಂತರ ಅರ್ಜಿಯ ಬಗ್ಗೆ ಅರ್ಜಿದಾರರು ತಮ್ಮ ಕೋರಿಕೆ ಮಂಡಿಸಿರುತ್ತಾರೆ. ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಕೋರಿಕೆಯಲ್ಲಿ 1ನೇ ಪ್ರತಿವಾದಿಯು ತಮ್ಮ ಸಂಸ್ಥೆಯಲ್ಲಿ ದಿನಾಂಕ:29.03.2003 ರಂದು ರೂ.25000/–ಗಳ ಸಾಲ ಪಡೆದಿದ್ದು ಈ ಸಾಲ ತೀರುವಳಿಯಾಗದೆ ಸುಸ್ತಿದಾರರಾಗಿರುತ್ತಾರೆಂದು ಈ ಸಾಲಕ್ಕೆ 2ನೇ ಹಾಗೂ 3ನೇ ಪ್ರತಿವಾದಿಗಳು ಜಾಮೀನುದಾರರೆಂದು, 1ನೇ ಪ್ರತಿವಾದಿಯ ತಮ್ಮ ಸ್ಥಿರಾಸ್ಥಿಯಾದ ಷೆಡ್ಯೂಲ್ ಸ್ವತ್ತನ್ನು ಈಗ ಪರಭಾರೆ ಮಾಡಲು ಉದ್ದೇಶಿಸಿದ್ದಾರೆಂದು ಇದನ್ನು ಅವರು ಪರಭಾರೆ ಮಾಡಿದಲ್ಲಿ ಈ ದಾವೆಯಲ್ಲಿ ಡಿಕ್ರಿ ನೀಡಿದರೂ ಸಾಲ ವಸೂಲಾಗದೆ ಹೋಗುವ ಸಂಭವವಿರುವುದರಿಂದ ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಅರ್ಜಿದಾರರ ಅರ್ಜಿ ಮತ್ತು ಕೋರಿಕೆಯನ್ನು ಹಾಗೂ ಅರ್ಜಿದಾರರ ಸಹಕಾರಿ ಪರ ಸಲ್ಲಿಸಿರುವ ದಾಖಲೆಗಳು, ಪ್ರಮಾಣ ಪತ್ರದ ಅಂಶಗಳನ್ನು ಪರಿಶೀಲಿಸಿದೆ. ಅರ್ಜಿದಾರರ ಸಂಸ್ಥೆಯಲ್ಲಿ ಸಾಲ ಪಡೆದಿದ್ದು ಸಾಲಗಾರರ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುವುದನ್ನು ಪರಿಶೀಲಿಸಲಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44ರ ರೀತ್ಯಾ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಮಾಡಲು ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸುವುದು ಈ ಹಂತದಲ್ಲಿ ಅಗತ್ಯವೆಂದು ಮನಗಂಡು, ಕೆಳಕಂಡ ಮಧ್ಯಂತರ ಆದೇಶವನ್ನು ಹೊರಡಿಸಿದೆ.

ಮಧ್ಯಂತರ ಆದೇಶ

ಈ ಆದೇಶದ ಅನುಬಂಧದಲ್ಲಿ ವಿವರಿಸಿರುವ 1ನೇ ಪ್ರತಿವಾದಿಯ ಹೆಸರಿನಲ್ಲಿನ ಸ್ಥಿರಾಸ್ತಿಗಳನ್ನು ಈ ನ್ಯಾಯಾಲಯದಲ್ಲಿ ಅರ್ಜಿದಾರರು ದಾಖಲು ಮಾಡಿರುವ ದಾವೆ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟು, ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪುಪೂರ್ವ ಜಪ್ತಿ ಮಾಡಿ, ಆದೇಶ ಹೊರಡಿಸಿದೆ. 1ನೇ ಪ್ರತಿವಾದಿಯು ಈ ಆದೇಶವನ್ನು ತೆರವುಗೊಳಿಸಲು ಇಚ್ಛಿಸಿದಲ್ಲಿ, ಅರ್ಜಿದಾರರ ಸಹಕಾರಿಯಲ್ಲಾಗಲೀ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಾಗಲೀ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಾಗಲೀ ಅಥವಾ ಇನ್ನಾವುದೇ ಸಹಕಾರ ಬ್ಯಾಂಕಿನಲ್ಲಿ ರೂ.26470/– (ರೂಪಾಯಿ ಇಪ್ಪತ್ತಾರು ಸಾವಿರದ ನಾಲ್ಕು ನೂರು ಎಪ್ಪತ್ತು ಮಾತ್ರ) ಗಳನ್ನು ಠೇವಣಿ ಮಾಡಿ, ಸಂಬಂಧಿಸಿದ ರಶೀದಿಯನ್ನು ಈ ಆದೇಶ ಪಡೆದ ದಿನದಿಂದ 15 ದಿವಸಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ವಿಫಲರಾದಲ್ಲಿ ಪ್ರತಿವಾದಿಯ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಿ, ಲಭ್ಯವಿರುವ ದಾಖಲೆಗಳು ಮತ್ತು ಅರ್ಹತೆಯ ಅನುಸಾರ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿಕೊಂಡಿರುವುದನ್ನು ಸ್ಥಿರೀಕರಣಗೊಳಿಸಿ, ಆದೇಶಿಸಲಾಗುವುದೆಂದು ಈ ಮೂಲಕ ಪ್ರತಿವಾದಿಗಳಿಗೆ ಆದೇಶಿಸಿದೆ. ಈ ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ:18.09.2010 ರಂದು ಬೆಳಿಗ್ಗೆ 11–00 ಗಂಟೆಗೆ ನಿಗದಿಪಡಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಸೂಕ್ತ ತಿದ್ದುಪಡಿ ಆದ ನಂತರ, ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:26.06.2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಸಹಕಾರ ಸಂಘಗಳ ನಿಬಂಧಕರು (ಕರ್ನಾಟಕ ರಾಜ್ಯ, ಬೆಂಗಳೂರು) ಇವರ ನ್ಯಾಯಾಲಯ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52

ದಾವೆ ಸಂಖ್ಯೆ: ಆರ್‌ಸಿಎಸ್/ ಡಿಐಆಸ್/ ಡಿ4/ ಸೌ/ 1/2010–11

ಅನುಬಂಧ

ಶ್ರೀ ಆನಂದ ಉದ್ದಪ್ಪ ಕಡಕೋಳ, ಇವರಿಗೆ ಸೇರಿದ, ಷರತ್ತಿಗೊಳಪಟ್ಟು, ತೀರ್ಪು ಪೂರ್ವ ಜಪ್ತಿ ನೋಟೀಸ್ ಆದೇಶಕ್ಕೆ ಒಳಪಡಿಸಿದ ಸ್ಥಿರಾಸ್ತಿಗಳ ವಿವರಗಳು

ಹಾವೇರಿ ಜಿಲ್ಲೆ, ಹಾವೇರಿ ತಾಲ್ಲೂಕು, ಹಾವೇರಿ ಗ್ರಾಮದ ರಿ.ಸ.ನಂ.177 ಕ ಪ್ಲಾಟ್ ನಂ.8 ಕ್ಷೇತ್ರ 04–05.5 ಇದರ ಪೈಕಿ 01–12.5

ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪಿ.ಆರ್.1398

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರ ನ್ಯಾಯಾಲಯ, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ

ಅಧಿಭಾರ ಅರ್ಜಿ ಸಂಖ್ಯೆ:14/2005–06

ಅರ್ಜಿದಾರರು:

ಕಾರ್ಯದರ್ಶಿ,
ಗ್ರಾಮಾಂತರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಶಿವಮೊಗ್ಗ.

ಎದುರು ಅರ್ಜಿದಾರರು

1) ವಿ. ನರಸೇಗೌಡ ಬಿನ್ ವೆಂಕಟರಮಣಯ್ಯ,
ಗಾಡಿಕೊಪ್ಪ ವಾಸಿ, ಶಿವಮೊಗ್ಗ.
2) ಎಸ್.ಟಿ. ಹಾಲಪ್ಪ ಬಿನ್ ತಿಮ್ಮಪ್ಪ,
ಪ್ರಿಯದರ್ಶಿನಿ ಬಡಾವಣೆ, ಶಿವಮೊಗ್ಗ.
3) ಬಸಪ್ಪ, ಬಿನ್ ಕೆಂಚಪ್ಪ,
ಕಾಶಿಪುರ ವಾಸಿ, ವಿನೋಬನಗರ ಅಂಚೆ, ಶಿವಮೊಗ್ಗ.
4) ಭೀಮಪ್ಪ ಬಿನ್ ಹುರಗುಲಪ್ಪ,
ಕಾಶಿಪುರ ವಾಸಿ, ವಿನೋಬನಗರ ಅಂಚೆ, ಶಿವಮೊಗ್ಗ.
5) ಈಶ್ವರಪ್ಪ ಬಿನ್ ರುದ್ರಪ್ಪ,
ಮುದುವಾಲ ವಾಸಿ, ಹಾರನಹಳ್ಳಿ ಅಂಚೆ, ಶಿವಮೊಗ್ಗ.
6) ಸೈಯದ್ ಬುಡೇನ್‌ಸಾಬ್ ಬಿನ್ ಸೈಯದ್ ಫಕ್ರುದ್ದೀನ್ ಸಾಬ್,
ಸೋಮಿನಕೊಪ್ಪ ಅಂಚೆ, ಕೋಟೆಗಂಗೂರು, ಶಿವಮೊಗ್ಗ ತಾ:
7) ಫಾತೀಮಾ ಬೀ, ಕೋಂ ಅಬ್ದುಲ್ ಸಲಾಂ,
ಸೋಮಿನಕೊಪ್ಪ ಅಂಚೆ, ಕೋಟೆಗಂಗೂರು, ಶಿವಮೊಗ್ಗ ತಾ:
8) ಓ. ಸಿದ್ದಪ್ಪ ಬಿನ್ ತಿಮ್ಮಪ್ಪ, ಕಲ್ಲಗಂಗೂರು, ಅಬ್ಬಲಗೆರೆ ಅಂಚೆ,
ಶಿವಮೊಗ್ಗ ತಾಲ್ಲೂಕು.
9) ಎಚ್.ಜಿ. ಹನುಮಂತಪ್ಪ (ಮೃತಿ)
ವಾರಸುದಾರರು: ಲಕ್ಷ್ಮಮ್ಮ ಕೋಂ ದಿ: ಹನುಮಂತಪ್ಪ, ಆಲ್ಕೋಳ
ಗ್ರಾಮ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ.
10) ಆಡಿವೆಪ್ಪ ಬಿನ್ ಕಲ್ಲಣ್ಣರ ದುರ್ಗಪ್ಪ, ಹರಮಘಟ್ಟ ಗ್ರಾಮ,
ಹರಮಘಟ್ಟ ಅಂಚೆ, ಶಿವಮೊಗ್ಗ.
11) ಎ.ಇ. ಚಂದ್ರಶೇಖರ್ (ಮೃತಿ)
ವಾರಸುದಾರರು: ಶ್ರೀಮತಿ ಪಂಕಜ, ಕೋಂ ದಿ:
ಎ.ಇ.ಚಂದ್ರಶೇಖರ್ ಕೇರಾಫ್ ಈಶ್ವರಪ್ಪ, ಬಿನ್ ಬಸಪ್ಪ,
ರಾಜೇಂದ್ರನಗರ ಬಲಭಾಗ, 3ನೇ ಕ್ರಾಸ್, ಶಿವಮೊಗ್ಗ.
12) ಶ್ರೀಮತಿ ನಾಗರತ್ನಮ್ಮ ಕೋಂ ಶೇಖರಪ್ಪ ಪುರದಾಳು ಅಂಚೆ,
ಶಿವಮೊಗ್ಗ.
13) ಜಿ.ಎಂ. ವೀರಭದ್ರಪ್ಪ, ಬಿನ್ ಮಂಜಾನಾಯ್ಕ, ಪುರದಾಳು
ಅಂಚೆ, ಶಿವಮೊಗ್ಗ.
14) ಶ್ರೀಮತಿ ಜಿ.ಎನ್. ಶೋಭಾ, ಬಿನ್ ನರಸೇಗೌಡ,
15) ಶ್ರೀಮತಿ ಜಿ.ಎನ್. ಗೀತಾ ಬಿನ್ ನರಸೇಗೌಡ
16) ಶ್ರೀಮತಿ ಜಿ.ಎನ್. ವನಜಾಕ್ಷಿ ಬಿನ್ ನರಸೇಗೌಡ
17) ಶ್ರೀನಿವಾಸ ಬಿನ್ ನರಸೇಗೌಡ
18) ಶ್ರೀಮತಿ ಗೌರಮ್ಮ ಕೋಂ ನರಸೇಗೌಡ, ಗಾಡಿಕೊಪ್ಪ ವಾಸ,
ಶಿವಮೊಗ್ಗ.
19) ಶ್ರೀ ಪ್ರಭಾಕರ್ ಬಿನ್ ರಾಮಣ್ಣಗೌಡ ಸಿ.ಸಿ.ಟಿ.ಬಿ. ಲೇಔಟ್,
ವಿಕಾಸ ಸ್ಕೂಲ್ ಹತ್ತಿರ ವಿನೋಬನಗರ, ಶಿವಮೊಗ್ಗ.
20) ಹನುಮಂತಮ್ಮ ಕೋಂ ಅವಲಕ್ಕಿ ರಂಗಪ್ಪ, ಅಲ್ಕೊಳ,
ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ:
21) ಶಿವಣ್ಣ ಬಿನ್ ಅವಲಕ್ಕಿ ರಂಗಪ್ಪ, ಅಲ್ಕೊಳ, ಗಾಡಿಕೊಪ್ಪ ಅಂಚೆ,
ಶಿವಮೊಗ್ಗ ತಾ:
22) ಮಂಜಪ್ಪ ಬಿನ್ ಅವಲಕ್ಕಿ ರಂಗಪ್ಪ, ಅಲ್ಕೊಳ, ಗಾಡಿಕೊಪ್ಪ
ಅಂಚೆ, ಶಿವಮೊಗ್ಗ ತಾ:
23) ಪರಮೇಶ್ ಬಿನ್ ಅವಲಕ್ಕಿ ರಂಗಪ್ಪ, ಅಲ್ಕೊಳ, ಗಾಡಿಕೊಪ್ಪ
ಅಂಚೆ, ಶಿವಮೊಗ್ಗ ತಾ:

24) ಶೇಖರ್ ಬಿನ್ ಅವಲಕ್ಕಿ ರಂಗಪ್ಪ, ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ:

25) ನಾಗರಾಜಪ್ಪ ಬಿನ್ ಅವಲಕ್ಕಿ ರಂಗಪ್ಪ, ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ:

26) ರಾಜಪ್ಪ ಬಿನ್ ಅವಲಕ್ಕಿ ರಂಗಪ್ಪ, ಅಲ್ಕೊಳ, ಗಾಡಿಕೊಪ್ಪ ಅಂಚೆ, ಶಿವಮೊಗ್ಗ ತಾ:

27) ಬಸಮ್ಮ ಕೋಂ ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ:

28) ಶಿವಲಿಂಗಪ್ಪ ಬಿನ್ ಎಂ. ಬಸಪ್ಪ ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ:

29) ಕುಮಾರ ಬಿನ್ ಎಂ. ಬಸಪ್ಪ, ಗಾಡಿಕೊಪ್ಪ ಗ್ರಾಮ, ಶಿವಮೊಗ್ಗ ತಾ:

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 103ರ ಮೇರೆಗೆ ತೀರ್ಪು ಪೂರ್ವ ಜಪ್ತು ಆಜ್ಞೆ)

ಪ್ರಸ್ತಾವನೆ:

ಅರ್ಜಿದಾರರ ಸಂಘ ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69 ರಡಿಯಲ್ಲಿ ಎದುರು ಅರ್ಜಿದಾರರ ವಿರುದ್ಧ 1995–96 ರಿಂದ 2001–02ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಂತೆ ರೂ.9,47,380–00 ಗಳ ಹಣ ವಸೂಲಾತಿ ಬಗ್ಗೆ ಎದುರಿಗಳ ವಿರುದ್ಧ ಅಧಿಭಾರ ಅರ್ಜಿಯನ್ನು ದಾಖಲು ಮಾಡಿ, ಈ ಸಂಬಂಧವಾಗಿ ಅರ್ಜಿಯನ್ನು ಸಲ್ಲಿಸಿ ಕಾಯ್ದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತು ಆದೇಶಕ್ಕೆ ಒಳಪಡಿಸಲು 20ನೇ ಎದುರು ಅರ್ಜಿದಾರರಾದ ಶ್ರೀಮತಿ ಹನುಮಂತಮ್ಮ ಕೋಂ ಅವಲಕ್ಕಿ ರಂಗಪ್ಪ ಇವರಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 103 ರನ್ವಯ ಷರತ್ತು ಪೂರ್ವಕ ಜಪ್ತಿ ಆಜ್ಞೆಯ ನೋಟೀಸನ್ನು ದಿನಾಂಕ:30.07.2010 ರಂದು ಈ ನ್ಯಾಯಾಲಯದಿಂದ ಹೊರಡಿಸಿದ್ದು, ಸದರಿ ಆಜ್ಞೆಯ ನೋಟೀಸ್ ಪ್ರತಿಯನ್ನು 20ನೇ ಎದುರಿ ಪಡೆದು, ಅದರಲ್ಲಿನ ಷರತ್ತುಗಳನ್ನು ಪೂರೈಸಲು ವಿಫಲರಾಗಿರುವುದರಿಂದ ದಿನಾಂಕ:30.07.2010 ರಂದು ಹೊರಡಿಸಿದ ಷರತ್ತು ಪೂರ್ವ ಜಪ್ತು ಆಜ್ಞೆಯನ್ನು ಸ್ಥಿರೀಕರಣಗೊಳಿಸಲು ತೀರ್ಮಾನಿಸಿ (ಖಾಯಂಗೊಳಿಸಿ) ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಕ್ರಮಾಂಕ: ಸನಿಶಿ 24/ಎಬಿಎನ್.ಕಲಂ 103/ 2010–11, ದಿನಾಂಕ:16.08.2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಎ.ಎಸ್. ಜಯಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, 20ನೇ ಎದುರು ಅರ್ಜಿದಾರರಾದ ಶ್ರೀಮತಿ ಹನುಮಂತಮ್ಮ, ಕೋಂ ಅವಲಕ್ಕಿ ರಂಗಪ್ಪ ಇವರಿಗೆ ಸೇರಿದ ಈ ಕೆಳಕಂಡ "ಅನುಸೂಚಿ" ಯಲ್ಲಿ ತೋರಿಸಿದ ಸ್ಥಿರಾಸ್ತಿಯನ್ನು ಮೇಲ್ಕಂಡ ಅಧಿಭಾರ ಅರ್ಜಿಯ ತೀರ್ಪನ್ನು ಕಾಯ್ದಿರಿಸಿ, ದಿನಾಂಕ:30.07.2010ರ ಷರತ್ತು ಪೂರ್ವಕ ಜಪ್ತು ಆಜ್ಞೆಯನ್ನು ಸ್ಥಿರೀಕರಿಸಿ ಆದೇಶಿಸಿದೆ.

ಈ ಆದೇಶದ ಅನುಸೂಚಿಯಲ್ಲಿರುವ ಸ್ವತ್ತುಗಳನ್ನು ಪಡೆಯುವ ಅಥವಾ ಖರೀದಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಸಹ ಷರತ್ತು ಪೂರ್ವಕ ಜಪ್ತು ಆಜ್ಞೆಗೆ ಒಳಪಡುವರು ಎಂದು ಸಹ ಆದೇಶಿಸಿದೆ.

ಜಪ್ತು ಆದೇಶಕ್ಕೆ ಒಳಗಾದ ಸ್ವತ್ತುಗಳ ಅನುಸೂಚಿ

ಕ್ರ. ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ಖಾತೆ ನಂ.	ಸರ್ವೆ ನಂ.	ವಿಸ್ತೀರ್ಣ		ತರಹೆ
					ಎಕರೆ	ಗುಂಟೆ	
1.	ಹನುಮಂತಮ್ಮ ಕೋಂ ರಂಗಪ್ಪ	ಆಲ್ಕೋಳ ಕಸಬಾ–1 ಶಿವಮೊಗ್ಗ	98	89	4	07	ತರಿ

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:16.08.2010 ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ

ಪಿ.ಆರ್.1374

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರಸ್ತೆ, ಬೆಂಗಳೂರು, ಇವರ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಬೆಂಗಳೂರು ಉತ್ತರವಲಯ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಸಹಕಾರ ಸಂಘ ನಿ., ಬೆಂಗಳೂರು ಈ ಸಂಘದ ನೋಂದಣಿ ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಉಪನಿಬಂಧಕರು–1 ಬೆಂಗಳೂರು ನಗರ ಜಿಲ್ಲೆ, ಇವರ ಪತ್ರ ಸಂಖ್ಯೆ: ಡಿಆರ್‌ಬಿ/1/ಸಮಾಪನೆ/33/2004–05, ದಿನಾಂಕ:21.03.2005.

2) ಈ ಕಛೇರಿಯ ಸಮಾಪನಾ ಆದೇಶದ ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/23/05–06, ದಿನಾಂಕ:06.06.2005.

3) ಸಮಾಪನಾಧಿಕಾರಿಗಳು ನಡೆಸಿದ ಸಭೆ ನಡವಳಿಗಳ ದಿನಾಂಕ:26.10.2009.

4) ಉಪನಿಬಂಧಕರು–1 ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಡಿಆರ್‌ಬಿ/1/ಸಮಾಪನೆ/12/09–10, ದಿನಾಂಕ:19.11.2009.

ಪ್ರಸ್ತಾವನೆ:

ಬೆಂಗಳೂರು ಉತ್ತರವಲಯ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಸಹಕಾರ ಸಂಘ ನಿ., ಬೆಂಗಳೂರು ಈ ಸಂಘವು ಆರ್‌ಸಿಎಸ್:14/03/71–72, ದಿನಾಂಕ:05.02.1972 ರಂತೆ ನೊಂದಣಿಯಾಗಿದ್ದು, ಇದು ರಾಜ್ಯ ಮಟ್ಟದ ಸಹಕಾರ ಸಂಘವಾಗಿರುತ್ತದೆ. ಉಲ್ಲೇಖ (1)ರನ್ವಯ ಸಹಕಾರ ಸಂಘಗಳ ಉಪನಿಬಂಧಕರು–1 ಬೆಂಗಳೂರು ಇವರು ನೀಡಿದ ವರದಿಯಂತೆ ಸಂಘವು ತನ್ನ ನೋಂದಾಯಿತ ಉದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸದೆ ಸ್ಥಗಿತಗೊಂಡಿದ್ದರಿಂದ ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ದಿನಾಂಕ:06.06.2005 ರಂದು ಉಲ್ಲೇಖ (2)ರನ್ವಯ ಸಮಾಪನೆಗೊಳಿಸಿ ಸಹಾಯಕ ನಿಬಂಧಕರು–1ನೇ ವಲಯ ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಸಮಾಪನಾಧಿಕಾರಿಗಳು ಸಂಘದ ಸ್ವಯಂ ಪ್ರಭಾರವನ್ನು ದಿನಾಂಕ:04.08.2005ರಂದು ವಹಿಸಿಕೊಂಡು ಸಮಾಪನಾ ನಡವಳಿಗಳನ್ನು ಕೈಗೊಂಡಿದ್ದು ಅದರಂತೆ ದಿನಾಂಕ:26.10.2009ರಂದು ಸಮಾಪನಾಧಿಕಾರಿಗಳ ಸಭೆ ಜರುಗಿಸಿ ಸಂಘವನ್ನು ಮುಂದುವರಿಸಿಕೊಂಡು ಹೋಗುವುದರಿಂದ ಸಂಘದ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ರೀತಿಯ ಉಪಯೋಗ ಇಲ್ಲದಿರುವುದನ್ನು ಗಮನಿಸಿ, ಸದರಿ ಸಮಾಪನಾ ಸಹಕಾರ ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಪಡಿಸಲು ಪ್ರಸ್ತಾವೆ ಸಲ್ಲಿಸಲು ತೀರ್ಮಾನಿಸಿರುತ್ತಾರೆ.

ಸಂಘದಲ್ಲಿ ಯಾವುದೇ ವ್ಯವಹಾರ ಇಲ್ಲದೆ ಇರುವುದರಿಂದ ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಸದರಿ ಸಂಘದ ನೋಂದಣಿ ರದ್ದುಪಡಿಸುವುದು ಸೂಕ್ತವೆಂದು ಸಹಕಾರ ಸಂಘಗಳ ಉಪನಿಬಂಧಕರು–1 ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಅಭಿಪ್ರಾಯಪಟ್ಟು ಶಿಫಾರಸ್ಸು ಮಾಡಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸಂಘವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸುವುದರಿಂದ ಸಾರ್ವಜನಿಕರಿಗಾಗಲೀ ಅಥವಾ ಸದಸ್ಯರಿಗಾಗಲೀ ಯಾವುದೇ ಪ್ರಯೋಜನಕಾರಿಯಾಗಿಲ್ಲವೆಂದು ಮನಗೊಂಡು ಸದರಿ ಸಮಾಪನ ಸಂಘದ ನೊಂದಣಿಯನ್ನು ರದ್ದುಗೊಳಿಸುವುದು ಸಮಂಜಸವೆಂದು ಪರಿಭಾವಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/23/05–06, ದಿನಾಂಕ:11.10.2010

ಪ್ರಸ್ತಾವನೆಯಲ್ಲಿ ಪ್ರತಿಪಾದಿಸಲಾದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಹೆಚ್.ವಿ. ಪಾರ್ಶ್ವನಾಥ್ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 75ರಡಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸಮಾಪನೆಗೊಂಡಿರುವ ಬೆಂಗಳೂರು ಉತ್ತರವಲಯ, ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಸಹಕಾರ ಸಂಘ ನಿಯಮಿತ, ಇದರ ನೋಂದಣಿ ಸಂಖ್ಯೆ: ಆರ್‌ಸಿಎಸ್/14/03/71–72, ದಿನಾಂಕ:05.02.1972ನ್ನು ರದ್ದುಪಡಿಸಿರುತ್ತೇನೆ. ಈ ನೋಂದಣಿ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳು ಸಂಪೂರ್ಣವಾಗಿ ನಿಂತುಹೋಗಿರುತ್ತದೆಂದು ಸಂಘವು ಅಸ್ತಿತ್ವದಲ್ಲಿಲ್ಲದೆ ವಿಸರ್ಜಿತವಾಗಿದೆಯೆಂದು ಪರಿಗಣಿಸತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:11.10.2010 ರಂದು ಹೊರಡಿಸಲಾಗಿದೆ.

ಹೆಚ್.ವಿ. ಪಾರ್ಶ್ವನಾಥ್

ಪಿ.ಆರ್.1519

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಅಪರ ನಿಬಂಧಕರು, (ಗೃಹ ಮತ್ತು ಇತರೆ), ಕೇಂದ್ರ ಕಛೇರಿ, ಬೆಂಗಳೂರು, ಇವರ ನಡವಳಿಗಳು

ವಿಷಯ: ಸ್ಥಗಿತಗೊಂಡಿರುವ ಕೃಷ್ಣಾ ದ್ರಾಕ್ಷಿ ಬೆಳೆಗಾರರ ಸಹಕಾರ ಸಂಘ ನಿ., ಐನಾಪೂರ ತಾಲ್ಲೂಕು, ಅಥಣಿ ಈ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಉಪನಿಬಂಧಕರು, ಬೆಳಗಾಂ ಇವರ ಪತ್ರ ಸಂಖ್ಯೆ:ವಿಆರ್‌ಎಲ್/ಆರ್‌ಎಸ್‌ಆರ್/21/ಸಮಾಪನೆ/ 2008–09, ದಿನಾಂಕ:15.05.2008.

2) ಈ ಕಛೇರಿಯ ನೋಟೀಸ್‌ನ ಸಮಸಂಖ್ಯೆಯ ಪತ್ರ ದಿನಾಂಕ:19.06.2008.

ಪ್ರಸ್ತಾವನೆ:

ಸ್ಥಗಿತಗೊಂಡಿರುವ ಕೃಷ್ಣಾ ದ್ರಾಕ್ಷಿ ಬೆಳೆಗಾರರ ಸಹಕಾರ ಸಂಘ ನಿ., ಐನಾಪೂರ ತಾಲ್ಲೂಕು, ಅಥಣಿ ಈ ಸಂಘದ ಕಾರ್ಯವ್ಯಾಪ್ತಿಯು ಜಿಲ್ಲಾಮಟ್ಟಕ್ಕೆ ಸೀಮಿತವಾಗಿರುತ್ತದೆ. ಉಲ್ಲೇಖ (1)ರ ಪತ್ರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಬೆಳಗಾಂ ಇವರು ಸದರಿ ಸಂಘವನ್ನು ಸಮಾಪನೆಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಸದರಿ ಸಂಘದ ಆಡಳಿತ ಮಂಡಳಿಯವರಿಗೆ ಸಮಾಪನೆಗೊಳಿಸುವ ಬಗ್ಗೆ ಉಲ್ಲೇಖ (2)ರಲ್ಲಿ

ನೋಟೀಸನ್ನು ಕಳುಹಿಸಿ ಸಮಾಪನೆಗೊಳಿಸುವ ಕುರಿತು ಆಕ್ಷೇಪಣೆಗಳನ್ನು 15 ದಿವಸದೊಳಗಾಗಿ ಸಲ್ಲಿಸಲು ಸೂಚಿಸಿದ್ದು, ಅದರಂತೆ ಆಡಳಿತ ಮಂಡಳಿಯವರಿಗೆ ನೋಟೀಸುಗಳನ್ನು ಜಾರಿ ಮಾಡಿ ಸ್ವೀಕೃತಿಯನ್ನು ಸಹ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಆದರೆ ಆಡಳಿತ ಮಂಡಳಿಯವರು ಆಕ್ಷೇಪಣೆಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸದೇ ಇರುವ ಕಾರಣ ಸಂಘದ ಅಸ್ತಿತ್ವದಿಂದ ಸಂಘದ ಸದಸ್ಯರಿಗೆ ಯಾವುದೇ ಪ್ರಯೋಜನವು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಹಾಗೂ ಈ ಸಂಘವನ್ನು ಪುನಃಶ್ಚೇತನಗೊಳಿಸಲು ಯಾವುದೇ ಸಾಧ್ಯತೆಗಳು ಇಲ್ಲದೇ ಇರುವುದರಿಂದ ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ರನ್ವಯ ಸಮಾಪನೆಗೊಳಿಸಲು ಸಹಕಾರ ಸಂಘಗಳ ಉಪನಿಬಂಧಕರು, ಬೆಳಗಾಂ ಜಿಲ್ಲೆ ಇವರು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರಂತೆ ಸಮಾಪನೆಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಗಿನ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/9/ 2008–09, ದಿನಾಂಕ:13.09.2010

ಪ್ರಸ್ತಾವೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿ.ಹೆಚ್. ಮಂಜಪ್ಪ, ಸಹಕಾರ ಸಂಘಗಳ ಅಪರ ನಿಬಂಧಕರು, (ಗೃಹ ಮತ್ತು ಇತರೆ) ಆದ ನಾನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/2001, ದಿನಾಂಕ:21.11.2001 ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ರನ್ವಯ ದತ್ತವಾಗಿರುವ ಅಧಿಕಾರದನ್ವಯ ಕೃಷ್ಣಾ ದ್ರಾಕ್ಷಿ ಬೆಳೆಗಾರರ ಸಹಕಾರ ಸಂಘ ನಿ., ಐನಾಪೂರ ತಾಲ್ಲೂಕು ಅಥಣಿ ಈ ಸಂಘವನ್ನು ಸಮಾಪನೆಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 73(1) ರನ್ವಯ ಸಹಕಾರ ಅಭಿವೃದ್ಧಿ ಅಧಿಕಾರಿ, ಅಥಣಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ. ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು 15 ದಿನಗಳೊಳಗಾಗಿ ಪಡೆದುಕೊಂಡು ಪ್ರಭಾರ ಪಟ್ಟಿಯನ್ನು ಸಲ್ಲಿಸತಕ್ಕದ್ದು. ಅಲ್ಲದೇ ಸಂಘದ ಅಡಾವೆ ಪತ್ರದ ಆಧಾರದ ಮೇಲೆ ಅಧ್ಯತಾ ಪಟ್ಟಿ ತಯಾರಿಸಿ ಈ ಕಛೇರಿಯಿಂದ ಅನುಮತಿ ಪಡೆದು ಆಸ್ತಿಯು ವಸೂಲಾದಂತೆ ಆಧ್ಯತೆ ಮೇಲೆ ಜವಾಬ್ದಾರಿ ತೀರುವಳಿ ಮಾಡಿ ಸಂಘದ ನೋಂದಣಿ ರದ್ಧತಿಯ ಪ್ರಸ್ತಾವೆಗೆ ಜರೂರು ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:13.09.2010 ರಂದು ಹೊರಡಿಸಲಾಗಿದೆ.

ಬಿ.ಹೆಚ್. ಮಂಜಪ್ಪ

ಪಿ.ಆರ್.1396

ಸಹಕಾರ ಸಂಘಗಳ ಅಪರ ನಿಬಂಧಕರು,

(ಗೃಹ ಮತ್ತು ಇತರೆ)

ಸಹಕಾರ ಸಂಘಗಳ ಅಪರ ನಿಬಂಧಕರು, (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಇವರ ನಡವಳಿಗಳು

ವಿಷಯ: ಸಮಾಪನೆಯಲ್ಲಿರುವ ಹಾಸನ ಜಿಲ್ಲಾ ತೋಟಗಾರಿಕಾ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., ಹಾಸನ, ಈ ಸಂಘದ ನೋಂದಣಿ ರದ್ದುಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮಾಪನಾ ಆದೇಶ ಸಂಖ್ಯೆ:ಆರ್‌ಸಿಎಸ್/ಎಲ್‌ಕ್ಯೂಡಿ/6/2003–04, ದಿನಾಂಕ:28.07.2003.

2) ಸಮಾಪನಾಧಿಕಾರಿಯ ಬದಲಾವಣೆ ಆದೇಶ ದಿನಾಂಕ:09.11.2005.

3) ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಇವರ ಪತ್ರ ಸಂಖ್ಯೆ: ಜೆಆರ್‌ಎಂ/ಎಸ್/10/ಸಮಾಪನೆ/ನೋಂದಣಿ/ಸಿಆರ್/11/ 2007–08, ದಿನಾಂಕ:16.07.2007.

ಪ್ರಸ್ತಾವನೆ:

ಹಾಸನ ಜಿಲ್ಲಾ ತೋಟಗಾರಿಕಾ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., ಹಾಸನ, ಈ ಸಂಘವು ಸಂಖ್ಯೆ ಹೆಚ್–2/ಎಂವೈಟಿ/80/105022/ಆರ್‌ಎಸ್, ದಿನಾಂಕ:30.10.1965 ರಲ್ಲಿ ನೋಂದಣಿಯಾಗಿದ್ದು, ಇದರ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟದ್ದಾಗಿರುತ್ತದೆ. ಉಲ್ಲೇಖ (1)ರ ಆದೇಶದಂತೆ ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಿದ್ದು, ಉಲ್ಲೇಖ (2)ರ ರೀತ್ಯಾ ಸಮಾಪನಾಧಿಕಾರಿಯವರನ್ನು ಬದಲಾಯಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಉಪ ನಿಬಂಧಕರ ಕಛೇರಿ, ಹಾಸನ ಇವರನ್ನು ಸಮಾಪನಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಅದರಂತೆ ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು ದಿನಾಂಕ:01.10.2003 ರಂದು ವಹಿಸಿಕೊಂಡು ಸಮಾಪನಾ ನಡವಳಿಗಳನ್ನು ಕೈಗೊಂಡಿದ್ದು, ಆಸ್ತಿ–ಜವಾಬ್ದಾರಿ ತೀರುವಳಿ ಮಾಡಿ, ಶೂನ್ಯಗೊಳಿಸಿದ ಆಸ್ತಿ–ಜವಾಬ್ದಾರಿ ತಃಖ್ತೆಯೊಡನೆ ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಗೊಳಿಸಲು ದಿನಾಂಕ:24.05.2007ರಂದು ನಡೆದ ಅಂತಿಮ ಮಹಾಸಭೆಯ ನಡವಳಿಯಲ್ಲಿ ತೀರ್ಮಾನಿಸಿರುತ್ತಾರೆ.

ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಉಪನಿಬಂಧಕರು, ಹಾಸನ ಜಿಲ್ಲೆ ರವರು ಸದರಿ ಸಂಘದ ಅಸ್ತಿತ್ವದಿಂದ ಸಂಘದ ಸದಸ್ಯರಿಗೆ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವೂ ಇರುವುದಿಲ್ಲವೆಂದು ಸಂಘದ ನೋಂದಣಿ ರದ್ದುಪಡಿಸಲು ಶಿಫಾರಸ್ಸು ಮಾಡಿರುವ ಪ್ರಯುಕ್ತ ಸಂಘದ ಸಮಾಪನಾಧಿಕಾರಿಯವರು ನಿಯಮಾನುಸಾರ ಸಮಾಪನಾ ನಡವಳಿಯನ್ನು ಪೂರ್ಣಗೊಳಿಸಿ, ಆಸ್ತಿ–ಜವಾಬ್ದಾರಿಯನ್ನು ಶೂನ್ಯಗೊಳಿಸಿರುವುದರಿಂದ ನೋಂದಣಿ ರದ್ಧತಿಗಾಗಿ ಶಿಫಾರಸ್ಸು ಮಾಡಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಪರಿಗಣಿಸಿ ಸಂಘವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸುವುದರಿಂದ ಸಾರ್ವಜನಿಕರಿಗಾಗಲೀ ಅಥವಾ ಸದಸ್ಯರಿಗಾಗಲೀ ಯಾವುದೇ ಪ್ರಯೋಜನಕಾರಿಯಾಗಿಲ್ಲವೆಂದು ಮನಗಂಡು, ಸದರಿ ಸಮಾಪನಾ ಸಂಘದ ನೋಂದಣಿಯನ್ನು ರದ್ದುಗೊಳಿಸುವುದು ಸಮಂಜಸವೆಂದು ಪರಿಭಾವಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ ಎಲ್‌ಕ್ಯೂಡಿ/06/2003–04, ದಿನಾಂಕ:29.09.2010

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವಂತೆ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೆ.ಹೆಚ್. ತಿಮ್ಮಯ್ಯ, ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರಡಿ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಹಾಸನ ಜಿಲ್ಲಾ ತೋಟಗಾರಿಕಾ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., ಹಾಸನ ಇದರ ನೋಂದಣಿ ಸಂಖ್ಯೆ: ಹೆಚ್–2/ಎಂವೈಟಿ 80/105022/ ಆರ್.ಎಸ್. ದಿನಾಂಕ:30.10.1965 ನ್ನು ರದ್ದುಪಡಿಸಿರುತ್ತೇನೆ. ಈ ನೋಂದಣಿ ರದ್ಧತಿಯ ಆದೇಶ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ನಿಂತು ಹೋಗಿರುತ್ತದೆಂದು ಸಂಘವು ಅಸ್ತಿತ್ವದಲ್ಲಿಲ್ಲದೆ ವಿಸರ್ಜಿತವಾಗಿದೆಯೆಂದು ಪರಿಗಣಿಸತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:29.09.2010 ರಂದು ಹೊರಡಿಸಲಾಗಿದೆ.

ಕೆ.ಹೆಚ್. ತಿಮ್ಮಯ್ಯ
ಸಹಕಾರ ಸಂಘಗಳ ಅಪರ ನಿಬಂಧಕರು,
(ಬಳಕೆ ಮತ್ತು ಮಾರಾಟ)

ಪಿ.ಆರ್.1479

ಸಹಕಾರ ಸಂಘಗಳ ಅಪರ ನಿಬಂಧಕರು, (ಬಳಕೆ ಮತ್ತು ಮಾರಾಟ) ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ನಡವಳಿಗಳು

ವಿಷಯ: ಮೈಸೂರು ವಿಶ್ವವಿದ್ಯಾನಿಲಯ ಬಳಕೆದಾರರ ಸಹಕಾರ ಸಂಘ ನಿ., ಮೈಸೂರು ಇದನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸ.ಸಂ.ಉಪ ನಿಬಂಧಕರು ಮೈಸೂರು ಇವರ ಪತ್ರ ಸಂಖ್ಯೆ:ಡಿಆರ್‌ಎಂ/ಬಿ4/ಸ್ಥಗಿತ/ಸಮಾಪನೆ/ಸಿಆರ್/08–09 ದಿನಾಂಕ:20.12.2008.

2) ಈ ಕಛೇರಿ ಸಮ ಸಂಖ್ಯೆಯ ನೋಟೀಸ್ ದಿನಾಂಕ:01.04.2009.

ಪ್ರಸ್ತಾವನೆ:

ಮೈಸೂರು ವಿಶ್ವವಿದ್ಯಾನಿಲಯ ಬಳಕೆದಾರರ ಸಹಕಾರ ಸಂಘ ನಿ., ಮೈಸೂರು, ಈ ಸಂಘವು ಕ್ರಮ ಸಂಖ್ಯೆ: ಆರ್‌ಜಿಎನ್/ಎಸ್‌ಎಸ್/ 623/67–68 ದಿನಾಂಕ:20.01.1968 ರನ್ವಯ ನೋಂದಣಿ ಆಗಿರುತ್ತದೆ. ಇದರ ಕಾರ್ಯವ್ಯಾಪ್ತಿಯು ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಅಧೀನ ಕಾಲೇಜುಗಳಿಗೆ ಸೀಮಿತವಾಗಿರುತ್ತದೆ. ಸಂಘವು ತನ್ನ ಮೂಲ ಉದ್ದೇಶಗಳನ್ವಯ ವ್ಯವಹರಿಸದೆ ಸ್ಥಗಿತಗೊಂಡಿರುತ್ತದೆ.

1) ಸದರಿ ಸಂಘವು 1998 ರಿಂದ ಸ್ಥಗಿತಗೊಂಡಿರುತ್ತದೆ.
2) ಸಂಘದ 1997–98ನೇ ಸಾಲಿನವರೆಗೆ ಮಾತ್ರ ಲೆಕ್ಕಪರಿಶೋಧನೆ ನಡೆದಿದ್ದು, ತರುವಾಯದ ಸಾಲುಗಳ ಲೆಕ್ಕಗಳ ಆಡಿಟ್ ಆಗಿರುವ ಬಗ್ಗೆ ಲೆಕ್ಕಪರಿಶೋಧನಾ ಇಲಾಖೆ, ಮೈಸೂರು ಉಪವಿಭಾಗ ಇವರ ಕಛೇರಿಯಲ್ಲಿ ಪರಿಶೀಲಿಸಲಾಗಿ, ಲಭ್ಯವಿರುವುದಿಲ್ಲವೆಂದು ಸ.ಸಂ. ಸಹಾಯಕ ನಿಬಂಧಕರು ಮೈಸೂರು ಇವರು ತಿಳಿಸಿರುತ್ತಾರೆ.
3) ಸ್ಥಗಿತಗೊಂಡಿರುವ ಸಹಕಾರ ಸಂಘವನ್ನು ಮುನ್ನಡೆಸಿಕೊಂಡು ಸಂಘದ ಬೈಲಾ ರೀತ್ಯಾ ತನ್ನ ಉದ್ದೇಶಗಳನ್ನು ಸದಸ್ಯರುಗಳಿಗೆ ಈಡೇರಿಸಲು ಯಾರಿಗೂ ಆಸಕ್ತಿ ಇಲ್ಲವೆಂದು ಸದಸ್ಯರುಗಳು ತಿಳಿಸಿರುತ್ತಾರೆಂದು, ಈ ಸಂಘವನ್ನು ಸ್ಥಗಿತದಲ್ಲಿ ಮುಂದುವರೆಸುವುದಕ್ಕಿಂತ ಸಮಾಪನೆಗೊಳಿಸಬೇಕೆಂದು ಸಹಾಯಕ ನಿಬಂಧಕರು ಮೈಸೂರು ಇವರು ಉಪನಿಬಂಧಕರು, ಮೈಸೂರು ಇವರಿಗೆ ಶಿಫಾರಸ್ಸು ಮಾಡಿರುತ್ತಾರೆ. ಹಾಲಿ ಸಂಘದ ಅಸ್ತಿತ್ವವನ್ನು ಮುಂದುವರೆಸುವುದರಿಂದ ಸಂಘದ ಸದಸ್ಯರಿಗಾಗಲೀ/ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿರುವುದಿಲ್ಲವೆಂದು ಪ್ರಸ್ತಾಪಿಸಿರುತ್ತಾರೆ.

ಆದ ಪ್ರಯುಕ್ತ ಸದರಿ ಸಹಕಾರ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ರನ್ವಯ ಸಮಾಪನೆಗೊಳಿಸಬಹುದು ಎಂದು ಸಹಕಾರ ಸಂಘಗಳ ಉಪನಿಬಂಧಕರು ಮೈಸೂರು ಜಿಲ್ಲೆ, ಇವರು ಪ್ರಸ್ತಾವೆಯನ್ನು ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸಂಘದ ಉಪನಿಯಮಗಳಂತೆ ಉದ್ದೇಶಗಳನ್ನು ಈಡೇರಿಸಲು ವಿಫಲವಾಗಿದ್ದು, ಸಂಘವನ್ನು ನಡೆಸಲು ಆಸಕ್ತಿ ತೋರದೆ ಇರುವುದು ಕಂಡುಬಂದಿರುವುದರಿಂದ ಸಂಘವನ್ನು ಕಲಂ 72(2) ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಪರಿಗಣಿಸಿ ಈ ಸಂಘದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ಉಲ್ಲೇಖ (1)ರಲ್ಲಿ ಕಾರಣ ಕೇಳುವ ನೋಟೀಸ್ ನೀಡಿ ಸದರಿ ಸಂಘವನ್ನು ಸಮಾಪನೆಗೊಳಿಸಲು ತಮ್ಮ ಆಕ್ಷೇಪಣೆ ಅಥವಾ ಹೇಳಿಕೆ ಏನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ ಈ ಕಛೇರಿಗೆ ಕಳುಹಿಸಲು ತಿಳಿಸಲಾಗಿದ್ದು, ಅದರಂತೆ ಜಾರಿಯಾಗಿದ್ದು, ಇದಕ್ಕೆ ಯಾರೂ ಸಹ ಸಮಜಾಯಿಷಿ/ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಸಂಘದಲ್ಲಿ ಸರ್ಕಾರದ ಷೇರು ಮತ್ತು ಸರ್ಕಾರದ ಸಾಲ ಮತ್ತು ಬಡ್ಡಿ ಬಾಕಿ ಇರುತ್ತದೆ. ಆದ್ದರಿಂದ ಸಂಘವನ್ನು ಸಮಾಪನೆಗೊಳಿಸಿ ಸ.ಸಂ. ನಗರ ನಿರೀಕ್ಷಕರು (ದಕ್ಷಿಣ) ಮೈಸೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ ಎಲ್‌ಕ್ಯೂಡಿ/54/08–09, ದಿನಾಂಕ:06.10.2010

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವಂತೆ ಅಂಶಗಳ ಹಿನ್ನೆಲೆಯಲ್ಲಿ ಕೆ.ಹೆಚ್. ತಿಮ್ಮಯ್ಯ, ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಛೇರಿ, ಬೆಂಗಳೂರು ಆದ ನಾನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/201/ಸಿಎಲ್‌ಎಂ/2008 ದಿನಾಂಕ:27.05.2010 ಹಾಗೂ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)ರನ್ವಯ ದತ್ತವಾಗಿರುವ ಅಧಿಕಾರದನ್ವಯ ಮೈಸೂರು ವಿಶ್ವವಿದ್ಯಾನಿಲಯ ಬಳಕೆದಾರರ ಸಹಕಾರ ಸಂಘ ನಿ., ಮೈಸೂರು ಈ ಸಂಘವನ್ನು ಸಮಾಪನೆಗೊಳಿಸಿ ಆದೇಶ ಹೊರಡಿಸಿರುತ್ತೇನೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 73(1) ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿಯ ಸ.ಸಂ. ನಗರ ನಿರೀಕ್ಷಕರು (ದಕ್ಷಿಣ) ಮೈಸೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು 15 ದಿನಗಳೊಳಗಾಗಿ ಪಡೆದುಕೊಂಡು ಪ್ರಭಾರ ಪಟ್ಟಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಸಂಘದ ಅಡಾವೆ ಪತ್ರದ ಆಧಾರದ ಮೇಲೆ ಆಧ್ಯತಾ ಪಟ್ಟಿ ತಯಾರಿಸಿ ಈ ಕಛೇರಿಯಿಂದ ಅನುಮತಿ ಪಡೆದು ಆಸ್ತಿಯು ವಸೂಲಾದಂತೆ ಆಧ್ಯತೆ ಮೇಲೆ ಜವಾಬ್ದಾರಿ ತೀರುವಳಿ ಮಾಡಿ ಸಂಘದ ನೋಂದಣಿ ರದ್ಧತಿಯ ಪ್ರಸ್ತಾವೆ ಸಲ್ಲಿಸಲು ಜರೂರು ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:06.10.2010 ರಂದು ಹೊರಡಿಸಲಾಗಿದೆ.

ಕೆ.ಹೆಚ್. ತಿಮ್ಮಯ್ಯ

ಪಿ.ಆರ್.1498

ಸಹಕಾರ ಸಂಘಗಳ ಅಪರ ನಿಬಂಧಕರು,
(ಬಳಕೆ ಮತ್ತು ಮಾರಾಟ)

ಸಹಕಾರ ಇಲಾಖೆ

ಸಹಕಾರ ಸಂಘಗಳ ಅಪರ ನಿಬಂಧಕರು, (ಗೃಹ ಮತ್ತು ಇತರೆ), ಕೇಂದ್ರ ಕಛೇರಿ, ಬೆಂಗಳೂರು, ಇವರ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಕನ್ನಂಬಾಡಿ ಜಲಾಶಯ ಮೀನುಗಾರರ ಸಹಕಾರ ಸಂಘ ನಿ., ಕೆ.ಆರ್.ಸಾಗರ, ನಾರ್ತ್ ಬ್ಯಾಂಕ್, ಪಾಂಡವಪುರ ತಾಲ್ಲೂಕು, ಇದರ ನೋಂದಣಿ ರದ್ಧತಿ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸಮಾಪನ ಆದೇಶ ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/42/2007–08, ದಿನಾಂಕ:03.12.2007.

2) ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರ ಪತ್ರ ಸಂಖ್ಯೆ: ಜೆಆರ್‌ಎಂ/ಎಸ್–10/ಸಮಾಪನೆ/ ನೋಂದಣಿ/ ಪಿಆರ್–377/2009–10, ದಿನಾಂಕ:27.01.2010.

3) ಸಮಾಪನಾಧಿಕಾರಿಗಳ ಸಭೆಯ ನಡವಳಿಗಳ ದಿನಾಂಕ:05.12.2009.

ಪ್ರಸ್ತಾವನೆ:

ಕನ್ನಂಬಾಡಿ ಜಲಾಶಯ ಮೀನುಗಾರರ ಸಹಕಾರ ಸಂಘ ನಿ., ಕೆ.ಆರ್.ಸಾಗರ, ನಾರ್ತ್ ಬ್ಯಾಂಕ್, ಪಾಂಡವಪುರ ತಾಲ್ಲೂಕು, ಈ ಸಂಘವು ಆರ್‌ಸಿಎಸ್/1976/63–64, ದಿನಾಂಕ:14.08.1963 ರಲ್ಲಿ ನೋಂದಣಿಯಾಗಿದ್ದು, ಇದರ ಕಾರ್ಯವ್ಯಾಪ್ತಿಯು ಮಂಡ್ಯ ಮತ್ತು ಮೈಸೂರು ಜಿಲ್ಲೆ ವ್ಯಾಪ್ತಿಯಾಗಿರುತ್ತದೆ. ಉಲ್ಲೇಖ (1)ರ ಆದೇಶದಂತೆ ಸಮಾಪನೆಗೊಳಿಸಿ ಸಮಾಪನಾಧಿಕಾರಿಯಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ, ಪಾಂಡವಪುರ, ಇವರನ್ನು ನೇಮಿಸಿದ್ದು ಈ ಆದೇಶದ ಮೇರೆಗೆ ಸಮಾಪನಾಧಿಕಾರಿಯವರು ಸ್ವಯಂ ಪ್ರಭಾರವನ್ನು ದಿನಾಂಕ:04.01.2008ರಲ್ಲಿ ವಹಿಸಿಕೊಂಡಿರುತ್ತಾರೆ. ಸಮಾಪನಾ ನಡವಳಿಕೆ ಪೂರ್ಣಗೊಳಿಸುವ ಸಲುವಾಗಿ ದಿನಾಂಕ:20.10.2009ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿ, ಸಂಬಂಧಿಸಿದ ಸಂಘದ ಪುನಃಶ್ಚೇತನದ ಬಗ್ಗೆ ಆಸಕ್ತಿ ಇದ್ದಲ್ಲಿ ಅಥವಾ ಸಂಘದ ನೋಂದಣಿ ರದ್ದುಪಡಿಸುವ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಮನವಿ ಸಲ್ಲಿಸುವಂತೆ ಪ್ರಕಟಣೆಯಲ್ಲಿ ಸೂಚಿಸಿದ್ದು, ಈ ಬಗ್ಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲವೆಂದು ತಿಳಿಸಿದ್ದು, ನೋಂದಣಿ ರದ್ಧತಿಗೆ ಸಂಬಂಧಿಸಿದಂತೆ ಸಮಾಪನಾಧಿಕಾರಿಗಳು ಅಂತಿಮ ಮಹಾಸಭೆಯನ್ನು ದಿನಾಂಕ:05.12.2009ರಂದು ನಡೆಸಿದ್ದು, ಸಂಘದ ಆಸ್ತಿ ಜವಾಬ್ದಾರಿಯನ್ನು ಶೂನ್ಯಗೊಳಿಸಿರುತ್ತಾರೆ.

ಸದರಿ ಸಂಘವನ್ನು ಯಥಾಸ್ಥಿತಿಯಲ್ಲೇ ಮುಂದುವರಿಸುವುದರಿಂದ ಸಂಘದ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವು ಇಲ್ಲದಿರುವುದರಿಂದ, ಸದರಿ ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವಂತೆ ಕೋರಿ ಪ್ರಸ್ತಾವೆಯನ್ನು ಸಹಕಾರ ಸಂಘಗಳ ಉಪನಿಬಂಧಕರು, ಮಂಡ್ಯ ಇವರು ಶಿಫಾರಸ್ಸು ಮಾಡಿರುವುದಾಗಿ ಉಲ್ಲೇಖ (2)ರಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಇವರು ತಿಳಿಸಿ, ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ರವರ ಶಿಫಾರಸ್ಸನ್ನು ಪರಿಗಣಿಸಿ ಸಂಘದ ನೋಂದಣಿ ಸಂಖ್ಯೆ: ಆರ್‌ಸಿಎಸ್/ 1976/63–64, ದಿನಾಂಕ:14.08.1963 ನ್ನು ರದ್ದುಪಡಿಸುವಂತೆ ಕೋರಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸದರಿ ಸಮಾಪನಾ ಸಂಘದ ನೋಂದಣಿಯನ್ನು ರದ್ದುಗೊಳಿಸುವುದು ಸಮಂಜಸವೆಂದು ಪರಿಭಾವಿಸಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಆರ್‌ಸಿಎಸ್/ಎಲ್‌ಕ್ಯೂಡಿ/42/2007–08, ದಿನಾಂಕ:12.10.2010

ಪ್ರಸ್ತಾವೆಯಲ್ಲಿ ಪ್ರಸ್ತಾಪಿಸಿರುವಂತೆ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬಿ.ಹೆಚ್. ಮಂಜಪ್ಪ, ಸಹಕಾರ ಸಂಘಗಳ ಅಪರ ನಿಬಂಧಕರು, (ಗೃಹ ಮತ್ತು ಇತರೆ), ಕೇಂದ್ರ ಕಛೇರಿ, ಬೆಂಗಳೂರು, ಆದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರಡಿ ನನಗೆ

ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸಮಾಪನೆಗೊಂಡಿರುವ ಕನ್ನಂಬಾಡಿ ಜಲಾಶಯ ಮೀನುಗಾರರ ಸಹಕಾರ ಸಂಘ ನಿ., ಕೆ.ಆರ್.ಸಾಗರ, ನಾರ್ತ್ ಬ್ಯಾಂಕ್, ಪಾಂಡವಪುರ ತಾಲ್ಲೂಕು ಇದರ ನೋಂದಣಿ ಸಂಖ್ಯೆ: ಆರ್‌ಸಿಎಸ್/1976/63–64, ದಿನಾಂಕ:14.08.1963ನ್ನು ರದ್ದುಪಡಿಸಿರುತ್ತೇನೆ. ಈ ನೋಂದಣಿ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ನಿಂತು ಹೋಗಿರುತ್ತದೆಂದು ಸಂಘವು ಅಸ್ಥಿತ್ವದಲ್ಲಿಲ್ಲದೆ ವಿಸರ್ಜಿತವಾಗಿದೆಯೆಂದು ಪರಿಗಣಿಸತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:12.10.2010 ರಂದು ಹೊರಡಿಸಲಾಗಿದೆ.

ಬಿ.ಹೆಚ್. ಮಂಜಪ್ಪ

ಪಿ.ಆರ್.1508

ಸಹಕಾರ ಸಂಘಗಳ ಅಪರ ನಿಬಂಧಕರು,
(ಗೃಹ ಮತ್ತು ಇತರೆ)

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ಕಾರ್ಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ,
ಪಂಪಮಹಾಕವಿ ರಸ್ತೆ, ಬೆಂಗಳೂರು–18

ಕ್ರ.ಸಂ.ಜೆಆರ್‌ಬಿ/ಸಮಾಪನೆ/90/2010–11, ದಿನಾಂಕ:29.09.2010

ವಿಷಯ: ಕೆ.ಎಸ್.ಐ.ಐ.ಡಿ.ಸಿ. ಎಂಪ್ಲಾಯೀಸ್ ಹೌಸಿಂಗ್ ಕೋ–ಅಪರೇಟಿವ್ ಸೊಸೈಟಿ ಲಿ., ಖನಿಜಭವನ, ಬೆಂಗಳೂರು, ಈ ಸಂಘವನ್ನು ಸಮಾಪನೆಗೊಳಿಸುವ ಕುರಿತು.

ಉಲ್ಲೇಖ: 1) ಸಹಕಾರ ಸಂಘಗಳ ಉಪನಿಬಂಧಕರು–2, ಬೆಂಗಳೂರು ನಗರ ಜಿಲ್ಲೆ, ಇವರ ಪತ್ರದ ಸಂಖ್ಯೆ: ಡಿಆರ್‌ಬಿ–2/ಸಮಾಪನೆ/ 08/ 2010–11, ದಿನಾಂಕ:14.05.2010.

2) ಈ ಕಛೇರಿಯ ಸಮಸಂಖ್ಯೆಯ ನೋಟೀಸಿನ ದಿನಾಂಕ:28.06.2010.

3) ಸಹಕಾರ ಸಂಘಗಳ ಉಪನಿಬಂಧಕರು–2, ಬೆಂಗಳೂರುನಗರ ಜಿಲ್ಲೆ ಇವರ ಪತ್ರದ ಸಂಖ್ಯೆ:ಡಿಆರ್‌ಬಿ–2/ಸಮಾಪನೆ/08/ 2010–11, ದಿನಾಂಕ:28.06.2010.

4) ಸಂಘದ ಕಾರ್ಯದರ್ಶಿ/ ಅಧ್ಯಕ್ಷರ ಪತ್ರದ ದಿನಾಂಕ:07.08.2010.

ಪ್ರಸ್ತಾವನೆ:

ಕೆ.ಎಸ್.ಐ.ಐ.ಡಿ.ಸಿ. ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಂಘವು ಬಹಳ ವರ್ಷಗಳಿಂದ ಕಾರ್ಯಚಟುವಟಿಕೆಗಳನ್ನು ನಡೆಸದೆ ಸ್ಥಗಿತಗೊಂಡಿದ್ದು, ಸಂಘದ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿಲ್ಲವೆಂದು, ಸಂಘದ ಕಾರ್ಯದರ್ಶಿಯವರ ಪತ್ರದ ಕೋರಿಕೆಯ ಮೇರೆಗೆ ಸಂಘವನ್ನು ಸಮಾಪನೆಗೊಳಿಸುವಂತೆ ಉಪನಿಬಂಧಕರು ಉಲ್ಲೇಖ(1) ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಉಪ ನಿಬಂಧಕರ ವರದಿಯ ಮೇರೆಗೆ ಉಲ್ಲೇಖ(2) ರ ಪತ್ರದಲ್ಲಿ ಈ ಕಛೇರಿಯಿಂದ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸು ಜಾರಿ ಮಾಡಲಾಗಿ, ಉಲ್ಲೇಖ(3)ರ ಪತ್ರದಲ್ಲಿ ನೋಟೀಸು ಜಾರಿ ಮಾಡಿದ ಸ್ವೀಕೃತಿಯನ್ನು ಉಪನಿಬಂಧಕರು ಕಳುಹಿಸಿರುತ್ತಾರೆ. ಉಲ್ಲೇಖ(4)ರ ಪತ್ರದಲ್ಲಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸಂಘದ ಸಮಾಪನೆಗೆ ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿರುತ್ತಾರೆ.

ಮೇಲಿನ ಕಾರಣಗಳಿಂದ ಹಾಗೂ ಉಪ ನಿಬಂಧಕರ ವರದಿಯ ಮೇರೆಗೆ ಸಂಘದ ಅಧ್ಯಕ್ಷರು/ ಕಾರ್ಯದರ್ಶಿಯವರ ಲಿಖಿತ ಹೇಳಿಕೆಯ ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಬಿ) ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/201/ ಸಿಎಲ್‌ಎಂ/2008, ದಿನಾಂಕ:27.05.2010ರಲ್ಲಿ ದತ್ತವಾಗಿರುವ ಅಧಿಕಾರದನ್ವಯ ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಆದ ನಾನು ಕೆ.ಎಸ್.ಐ.ಐ.ಡಿ.ಸಿ. ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಖನಿಜ ಭವನ, ಬೆಂಗಳೂರು ಈ ಸಂಘವನ್ನು ಸಮಾಪನೆಗೊಳಿಸಿ, ಸಮಾಪನಾಧಿಕಾರಿಯಾಗಿ ಶ್ರೀ ಮೂಡಲಗಿರಿಯಪ್ಪ, ಸಹಕಾರ ಅಭಿವೃದ್ಧಿ ಅಧಿಕಾರಿ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು ನೇಮಕ ಮಾಡಿರುತ್ತೇನೆ.

ನೇಮಕಗೊಂಡ ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು ವಹಿಸಿಕೊಂಡು ಸಂಘದ ಪುನಃಶ್ಚೇತನಕ್ಕಾಗಲೀ ಅಥವಾ ಸಂಘದ ನೋಂದಣಿ ರದ್ಧತಿಗಾಗಲೀ ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಮತ್ತು ಕಛೇರಿಯ ಮುದ್ರೆಯೊಂದಿಗೆ ದಿನಾಂಕ:29.09.2010 ರಂದು ಹೊರಡಿಸಲಾಗಿದೆ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,

ಪಿ.ಆರ್.1515

ಬೆಂಗಳೂರು ಪ್ರಾಂತ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಶ್ರೀ ಆದಿಶಕ್ತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ದೊಣ್ಣೆಹಳ್ಳಿ, ಜಗಳೂರು ತಾಲ್ಲೂಕು, ಇದರ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–/2009–10, ದಿನಾಂಕ:07.07.2010.

2) ಸಮಾಪನಾಧಿಕಾರಿಗಳ ಪ್ರಸ್ತಾವನೆ ಸಂ: ಸಅಅ/ಜಗಳೂರು/ಸಮಾಪನೆ/10–11, ದಿನಾಂಕ:24.09.2010.

3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪವಿಭಾಗ, ಹರಪನಹಳ್ಳಿ ಇವರ ಪತ್ರ ಸಂಖ್ಯೆ: ಸನಿಹೆಚ್‌ಆರ್‌ಪಿ/ ಸಮಾಪನೆ/ಸಿಆರ್–2/09–10, ದಿನಾಂಕ:29.09.2010.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಸಹಕಾರ ಸಂಘವು ನೋಂದಣಿ ಸಂಖ್ಯೆ: ಸನಿ/ಹೆಚ್‌ಆರ್‌ಪಿ/ಆರ್‌ಎಸ್‌ಆರ್/ 33520/03–04, ದಿನಾಂಕ:31.12.2002 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:07.07.2010ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, ಜಗಳೂರು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಸಮಾಪನಾಧಿಕಾರಿಗಳು ಪ್ರಭಾರ ವಹಿಸಿಕೊಂಡು ಸಂಘದ ಸಮಾಪನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿ ಸಂಖ್ಯೆ ರದ್ಧತಿಗಾಗಿ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪವಿಭಾಗ, ಹರಪನಹಳ್ಳಿ ಇವರ ಮುಖಾಂತರ ಉಲ್ಲೇಖ (2)ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಮಾಪನೆಗೊಂಡ ಶ್ರೀ ಆದಿಶಕ್ತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ದೊಣ್ಣೆಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ ನೋಂದಣಿ ಸಂಖ್ಯೆ: ಸನಿ/ಹೆಚ್‌ಆರ್‌ಪಿ/ಆರ್‌ಎಸ್‌ಆರ್/33520/03–04 ದಿನಾಂಕ:31.12.2002 ಸಂಘದ ಸಮಾಪನೆ ಕಾರ್ಯಚಟುವಟಿಕೆಗಳನ್ನು ಪೂರ್ಣಗೊಳಿಸಿರುವುದರಿಂದ ನೋಂದಣಿ ರದ್ಧತಿಯ ಆದೇಶವನ್ನು ನೀಡುವಂತೆ ಶಿಫಾರಸ್ಸಿನೊಂದಿಗೆ ಉಲ್ಲೇಖ (3)ರಲ್ಲಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ/ನೋಸಂರ/ಸಿಆರ್–/ 2009–10, ದಿನಾಂಕ:30.09.2010

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/201/ಸಿಎಲ್‌ಎಂ/2008, ಬೆಂಗಳೂರು ದಿನಾಂಕ:27.05.2010ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಶ್ರೀ ಆದಿಶಕ್ತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ದೊಣ್ಣೆಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ ನೋಂದಣಿ ಸಂಖ್ಯೆ: ಸನಿ/ಹೆಚ್‌ಆರ್‌ಪಿ/ಆರ್‌ಎಸ್‌ಆರ್/33520/03–04 ದಿನಾಂಕ:31.12.2002 ಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತು ಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:30.09.2010ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪನಿಬಂಧಕರು,

ಪಿ.ಆರ್.1516 ದಾವಣಗೆರೆ ಜಿಲ್ಲೆ, ದಾವಣಗೆರೆ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ನಾಗರಸನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ನಾಗರಸನಹಳ್ಳಿ, ದಾವಣಗೆರೆ ತಾಲ್ಲೂಕು, ಇದರ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–19/2008–09, ದಿನಾಂಕ:20.07.2009.

2) ಸಮಾಪನಾಧಿಕಾರಿ ಪ್ರಸ್ತಾವನೆ ಸಂ: ಸಸಂಹಿನಿ/ಹಾಮಸಸಂನಿ/ ನಾಗರಸನಹಳ್ಳಿ/ ನೋರ/09–10, ದಿನಾಂಕ:24.09.2010.

3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಪತ್ರ ಸಂಖ್ಯೆ: ಸನಿ31/ ಸಮಾಪನೆ/ಹಾಉಸಸಂನಿ/ನಾಗರಸನಹಳ್ಳಿ, ಸಿಆರ್–38/08–09, ದಿನಾಂಕ:28.09.2010.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ:ಸನಿ31/ಆರ್‌ಜಿಎನ್/2607/98–99, ದಿನಾಂಕ:06.11.1998ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:20.07.2009ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, ವೃತ್ತ 2, ದಾವಣಗೆರೆ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಸಮಾಪನಾಧಿಕಾರಿಗಳು ಸಂಘದ ಸಮಾಪನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿ ಸಂಖ್ಯೆ:ಸನಿ31/ಆರ್‌ಜಿಎನ್/2607/98–99 ದಿನಾಂಕ:06.11.1998 ಯನ್ನು ರದ್ದುಗೊಳಿಸಲು ಉಲ್ಲೇಖ (2)ರ ರೀತ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಸಂಘದ ಸಮಾಪನೆ ಕಾರ್ಯಚಟುವಟಿಕೆಗಳನ್ನು ಪೂರ್ಣಗೊಳಿಸಿರುವುದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘದ ನೋಂದಣಿ ರದ್ಧತಿಗೆ ಉಲ್ಲೇಖ (3)ರಲ್ಲಿ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ/ನೋಸಂರ/ಸಿಆರ್–19/ 2008–09, ದಿನಾಂಕ:30.09.2010

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/201/ಸಿಎಲ್‌ಎಂ/2008, ಬೆಂಗಳೂರು ದಿನಾಂಕ:27.05.2010ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ನಾಗರಸನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ನಾಗರಸನಹಳ್ಳಿ, ದಾವಣಗೆರೆ ತಾಲ್ಲೂಕು ಇದರ ನೋಂದಣಿ ಸಂಖ್ಯೆ: ಸನಿ31/ಆರ್‌ಜಿಎನ್/2607/98–99 ದಿನಾಂಕ:06.11.1998 ಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತು ಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

